ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮಾರ್ಚ್ 11, 2022

ಸಂಪುಟ : 48 ಸಂಚಿಕೆ : 300 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com

## ನಾಳೆ 'ಕಂದಾಯ ದಾಖಲೆ ಮನೆ ಬಾಗಿಲಿಗೆ' ಯೋಜನೆಗೆ ಚಾಲನೆ

### ಜಿಲ್ಲೆಯ 1.35 ಲಕ್ಷ ರೈತ ಕುಟುಂಬಗಳಿಗೆ ಪಹಣಿ, ಜಾತಿ-ಆದಾಯ ಪ್ರಮಾಣ ಪತ್ರ, ಅಟ್ಲಾಸ್ ವಿತರಣೆ

ದಾವಣಗೆರೆ, ಮಾ. 10 – ನಾಳೆ ಮಾ. 12ರ ಶನಿವಾರದಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ಅವರು 'ಕಂದಾಯ ದಾಖಲೆ ಮನೆ ಬಾಗಿಲಿಗೆ' ಯೋಜನೆಗೆ ಜಿಲ್ಲೆಯಲ್ಲಿ ಚಾಲನೆ ನೀಡಲಿದ್ದಾರೆ. ಕಂದಾಯ ದಾಖಲೆಗಳನ್ನು ಸಂಬಂಧಿಸಿದ ಎಲ್ಲರ ಮನೆಗಳಿಗೆ ತಲುಪಿಸುವುದು ಯೋಜನೆಯ ಉದ್ದೇಶ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕಂದಾಯ ಇಲಾಖೆಯ ವತಿಯಿಂದ ಸಾರ್ವಜನಿಕರಿಗೆ ನೀಡುವ ಮೂಲ ದಾಖಲೆಗಳಾದ ಪಹಣಿ, ಆದಾಯ/ಜಾತಿ ಪ್ರಮಾಣ ಪತ್ರ ಮತ್ತು ಅಟ್ಲಾಸ್‌ಗಳನ್ನು ರೈತರ ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸುವುದು ಈ ಯೋಜನೆಯ ಉದ್ದೇಶ ಎಂದವರು ಹೇಳಿದ್ದಾರೆ.

ಈ ಯೋಜನೆಯಡಿ ಜಿಲ್ಲೆಯ 1.35 ಲಕ್ಷ ರೈತ ಕುಟುಂಬಗಳಿಗೆ ಕಂದಾಯ ದಾಖಲೆಗಳನ್ನು ನೀಡಲಾಗುವುದು. 2.93 ಲಕ್ಷ ಪಹಣಿ, 3.23 ಲಕ್ಷ ಆದಾಯ ಮತ್ತು ಜಾತಿ ಪ್ರಮಾಣ ಪತ್ರ, 93 ಸಾವಿರ ಅಟ್ಲಾಸ್ ಸೇರಿದಂತೆ 7.10 ಲಕ್ಷ ದಾಖಲೆಗಳನ್ನು ವಿತರಿಸಲಾಗುವುದು ಎಂದವರು ಹೇಳಿದ್ದಾರೆ.

ಶನಿವಾರ ಜಿಲ್ಲಾ ಉಸ್ತುವಾರಿ ಸಚಿವರು ಗ್ರಾಮವೊಂದರಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಶಾಸಕರೂ ಸಹ ತಮ್ಮ ಕ್ಷೇತ್ರಗಳಲ್ಲಿ ಉದ್ಘಾಟನೆ ನೆರವೇರಿಸಲಿದ್ದಾರೆ. ಅದೇ ದಿನದಂದು ಪತ್ರಗಳನ್ನು ಪಡೆಯಲು ಸಾಧ್ಯವಾಗದಿದ್ದವರು, ಮಾ.21ರಿಂದ 26ರ ನಡುವಿನ ವಾರದಲ್ಲಿ ನಾಡಕಚೇರಿಯಲ್ಲಿ ಉಚಿತವಾಗಿ ಪತ್ರಗಳನ್ನು ಪಡೆಯಬಹುದು ಎಂದು ಹೇಳಿದರು.

ತಹಶೀಲ್ದಾರರು, ಉಪ ತಹಶೀಲ್ದಾರರು, ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಗ್ರಾಮ ಸಹಾಯಕ ಸಿಬ್ಬಂದಿಗಳ ಮೂಲಕ ದಾಖಲೆಗಳನ್ನು ವಿತರಿಸಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

**ಅಡುಗೆ ಎಣ್ಣೆ ಬಗ್ಗೆ ಕ್ರಮ :** ಅಡುಗೆ ಎಣ್ಣೆ ಕೃತಕ ಅಭಾವ ಸೃಷ್ಟಿಸಿ ಬೆಲೆ ಹೆಚ್ಚಿಸಲಾಗುತ್ತಿದೆ ಎಂಬ ಕುರಿತ ಪ್ರಶ್ನೆಗೆ ಉತ್ತರಿಸಿದ ಜಿಲ್ಲಾಧಿಕಾರಿ, ಆಹಾರ ಇಲಾಖೆ ಅಧಿಕಾರಿಗಳು ಗೋದಾಮುಗಳ ತಪಾಸಣೆ ನಡೆಸುವಂತೆ ಇಂದೇ ಸೂಚನೆ ನೀಡಲಾಗುವುದು ಎಂದು ಹೇಳಿದರು.

**ಉಕ್ರೇನ್‌ನಲ್ಲಿ ಜಿಲ್ಲೆಯ ಯಾರೂ ಇಲ್ಲ :** ಉಕ್ರೇನ್‌ನಲ್ಲಿ ಜಿಲ್ಲೆಯ 11 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು. ಇವರಲ್ಲಿ **(2ನೇ ಪುಟಕ್ಕೆ)**

## 15 ಸಾವಿರ ಅತಿಥಿ ಶಿಕ್ಷಕರ ನೇಮಕ

ಬೆಂಗಳೂರು, ಮಾಯ 10 - ಶಿಕ್ಷಕರ ಕೊರತೆ ನೀಗಿಸಲು 15,000 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಪಿ.ರಾಜೀವ್ ಪರವಾಗಿ ದುರ್ಯೋಧನ ಐಹೊಳೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಶಿಕ್ಷಕರ ಕೊರತೆ ಇರುವುದು ನಿಜ. ಸದ್ಯಕ್ಕೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಮೇನಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ ನಡೆಯಲಿದ್ದು, ಆ ನಂತರ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2000 'ಡಿ' ಗ್ರೂಪ್ ಹುದ್ದೆಗಳು ಖಾಲಿ ಇದ್ದು, ಸದ್ಯದಲ್ಲೇ ಭರ್ತಿಗೆ ಕ್ರಮ ವಹಿಸಲಾಗುವುದು. ಕಾಲೇಜು ಶಿಕ್ಷಣ ಇಲಾಖೆ ಕಚೇರಿ ಹಾಗೂ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 'ಡಿ' ಗ್ರೂಪ್ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಆರ್ಥಿಕ ಇಲಾಖೆ ಅನುಮತಿ ನೀಡಿದೆ. ನಿಯಮಾನುಸಾರ ಟೆಂಡರ್ ಕರೆದು ನೇಮಕ ಮಾಡಲಾಗುವುದು ಎಂದರು.

# ಪಂಜಾಬ್‌ಗೆ ಪೊರಕೆ ಉತ್ತರಕ್ಕೆ ಬುಲ್ಡೋಜರ್

### ಉತ್ತರಾಖಂಡ, ಉತ್ತರ ಪ್ರದೇಶ, ಗೋವಾ, ಮಣಿಪುರಗಳಲ್ಲಿ ಬಿಜೆಪಿ ಜಯಭೇರಿ, ಕಾಂಗ್ರೆಸ್ ಶೂನ್ಯ

**ಉತ್ತರ ಪ್ರದೇಶ**
ಬಿಜೆಪಿ-256, ಎಸ್‌ಪಿ-110
ಕಾಂಗ್ರೆಸ್-2, ಬಿಎಸ್‌ಪಿ-1, ಇತರೆ 34

**ಪಂಜಾಬ್**
ಆಮ್ ಆದ್ಮಿ-92, ಕಾಂಗ್ರೆಸ್-18
ಅಕಾಲಿದಳ-3, ಬಿಜೆಪಿ-2, ಇತರೆ-2

**ಉತ್ತರಾಖಂಡ**
ಬಿಜೆಪಿ-48, ಕಾಂಗ್ರೆಸ್-18
ಆಮ್ ಆದ್ಮಿ 0, ಇತರೆ-4

**ಮಣಿಪುರ**
ಬಿಜೆಪಿ-32, ಎನ್‌ಪಿಪಿ-7
ಕಾಂಗ್ರೆಸ್ 5, ಇತರೆ-16

**ಗೋವಾ**
ಬಿಜೆಪಿ-20, ಕಾಂಗ್ರೆಸ್ - 11
ಆಪ್-2, ಎಂಎಜಿ-2, ಇತರೆ-5




ನವದೆಹಲಿ, ಮಾ. 10 - ಪಂಚ ರಾಜ್ಯಗಳ ಚುನಾವಣೆಯಲ್ಲಿ ಉತ್ತರ ಪ್ರದೇಶ ಸೇರಿದಂತೆ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಕೇಸರಿ ಪತಾಕೆ ಹಾರಿಸಿದೆ. ಪಂಜಾಬ್‌ನಲ್ಲಿ ಕಾಂಗ್ರೆಸ್ ಗುಡಿಸಿ ಹಾಕಿರುವ ಆಮ್ ಆದ್ಮಿ ಪಾರ್ಟಿ ಅಭೂತಪೂರ್ವ ಜನಾದೇಶ ಪಡೆದಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಜಯಭೇರಿ ಬಾರಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿಗೆ ಮತ್ತಷ್ಟು ಬಲ ದೊರೆತಿದೆ. ಪ್ರತಿಪಕ್ಷವಾಗಿ ಕೇಂದ್ರದಲ್ಲಿ ಬಿಜೆಪಿಗೆ ಸವಾಲು ಹಾಕಲು ತಾನು ಸಿದ್ಧವಾಗಿ ರುವುದಾಗಿ ಆಮ್ ಆದ್ಮಿ ಪಾರ್ಟಿ ಘೋಷಿಸಿದೆ.

ಮತ್ತೊಂದೆಡೆ ಆಘಾತಕಾರಿ ಸೋಲಿನಿಂದ ಕಾಂಗ್ರೆಸ್ ಸಂಪೂರ್ಣ ಸೊರಗಿದೆ. ಪಂಜಾಬ್‌ನಲ್ಲಿ ಸರ್ಕಾರ ಕಳೆದುಕೊಂಡಿರುವ ಕಾಂಗ್ರೆಸ್, ಉತ್ತರ ಪ್ರದೇಶದಲ್ಲಿ ಸಾಧನೆ ತೋರಲು ವಿಫಲವಾಗಿದೆ. ಗೋವಾ ಹಾಗೂ ಉತ್ತರಾಖಂಡಗಳಲ್ಲಿ ಗೆಲುವು ಸಾಧಿಸುವ ಅವಕಾಶ ಕಳೆದುಕೊಂಡಿದೆ.

ಪೊರಕೆಯನ್ನು ಚುನಾವಣಾ ಸಂಕೇತವಾಗಿ ಹೊಂದಿರುವ ಆಮ್ ಆದ್ಮಿ ಪಾರ್ಟಿ ಪಂಜಾಬ್‌ನಲ್ಲಿ ಗೆದ್ದಿರುವುದು ಹಾಗೂ ಬುಲ್ಡೋಜರ್ ಬಾಬಾ ಎಂದೇ ಹೆಸರಾಗಿರುವ ಯೋಗಿ ಆದಿತ್ಯನಾಥ್ ನೇತೃತ್ವದಲ್ಲಿ ಬಿಜೆಪಿ ಉತ್ತರ ಪ್ರದೇಶದಲ್ಲಿ ಜಯ ಸಾಧಿಸಿರುವುದು ಪಂಚ ರಾಜ್ಯಗಳ ಚುನಾವಣೆಯಲ್ಲಿ **(2ನೇ ಪುಟಕ್ಕೆ)**

### ಅಮರಿಂದರ್ ಬಿಟ್ಟ-ಸೇರಿದ ಪಕ್ಷಗಳೆರಡಕ್ಕೂ ಸೋಲು

**ಚಂಡೀಘಡ, ಮಾ. 10 - ಪಂಜಾಬ್ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ರಚಿಸಿದ ಹೊಸ ಪಕ್ಷ ಖಾತೆ ತೆರೆಯಲು ವಿಫಲವಾಗಿದೆ. ಅವರ ಮಿತ್ರ ಪಕ್ಷ ಬಿಜೆಪಿ ಸಹ ವಿಫಲವಾಗಿದೆ. ಸ್ವತಃ ಅಮರಿಂದರ್ ತಮ್ಮ ಕ್ಷೇತ್ರದಲ್ಲಿ ಗೆಲುವು ಸಾಧಿಸಲು ವಿಫಲವಾಗಿದ್ದಾರೆ. ಅಮರಿಂದರ್ ತೊರೆದು ಬಂದಿದ್ದ ಕಾಂಗ್ರೆಸ್ ಸಹ ತೀವ್ರ ಮುಖಭಂಗಕ್ಕೀಡಾಗಿದೆ. ಅವರು ಸ್ಥಾಪಿಸಿದ್ದ ಪಂಜಾಬ್ ಲೋಕ್ ಕಾಂಗ್ರೆಸ್ ಒಂದು ಸ್ಥಾನವನ್ನೂ ಪಡೆದಿಲ್ಲ. ಆಮ್ ಆದ್ಮಿ ಪಾರ್ಟಿ ಪರವಾಗಿ ಬೀಸಿದ ಭರ್ಜರಿ ಅಲೆ, ಅಮರಿಂದರ್ ಲೆಕ್ಕಚಾರಾ ತಲೆಕೆಳಗಾಗಿ ಮಾಡಿದೆ.**

### ಇಬ್ಬರು ಹಾಲಿ, ಐವರು ಮಾಜಿ ಮುಖ್ಯಮಂತ್ರಿಗಳಿಗೆ ಸೋಲು

**ನವದೆಹಲಿ ಮಾ. 10 - ಐದು ರಾಜ್ಯಗಳಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಹಲವಾರು ಘಟಾನುಘಟಿಗಳಿಗೆ ಸೋಲಾಗಿದೆ. ಇವರಲ್ಲಿ ಇಬ್ಬರು ಹಾಲಿ ಮುಖ್ಯಮಂತ್ರಿಗಳು ಹಾಗೂ ಐವರು ಮಾಜಿ ಮುಖ್ಯಮಂತ್ರಿಗಳು ಸೇರಿದ್ದಾರೆ.**

**ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹಾಗೂ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸೋಲುಂಡಿದ್ದಾರೆ.**

**ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಹರೀಶ್ ಸಿಂಗ್ ರಾವತ್, ಪಂಜಾಬ್ ಮುಖ್ಯಮಂತ್ರಿಗಳಾದ ಪ್ರಕಾಶ್ ಸಿಂಗ್ ಬಾದಲ್, ಅಮರಿಂದರ್ ಸಿಂಗ್ ಹಾಗೂ ರಾಜಿಂದರ್ ಕೌರ್ ಭಟ್ಟಲ್ ಸಹ ಸೋಲು ಕಂಡಿದ್ದಾರೆ.**

**ಗೋವಾದ ಮಾಜಿ ಮುಖ್ಯಮಂತ್ರಿ ಚರ್ಚಿಲ್ ಅಲೆಮಾವೋ ಅವರು ತೃಣಮೂಲ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಸೋಲು ಕಂಡಿದ್ದಾರೆ.**

## ಪಂಜಾಬ್ ಪರಿಸ್ಥಿತಿಯೇ ರಾಜ್ಯದಲ್ಲೂ ಆದೀತು

ಬೆಂಗಳೂರು, ಮಾ. 10 - ಕರ್ನಾಟಕದಲ್ಲಿನ ಕಾಂಗ್ರೆಸ್ ನಾಯಕರ ಮುಸುಕಿನ ಗುದ್ದಾಟದಿಂದ ಮುಂಬರುವ ಚುನಾವಣೆಯಲ್ಲಿ ಪಂಜಾಬ್‌ನ ಸ್ಥಿತಿಯೇ ಇಲ್ಲಿಯೂ ಎದುರಾಗಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಉತ್ತರ ಪ್ರದೇಶ ಸೇರಿದಂತೆ ಬಿಜೆಪಿ ನಾಲ್ಕು ರಾಜ್ಯಗಳಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದು, ಪಂಜಾಬ್‌ನಲ್ಲಿ ಮಾತ್ರ ಎರಡಂಕಿ ದಾಟಲು ಸಾಧ್ಯವಾಗಲಿಲ್ಲ.

### ಸಿದ್ದರಾಮಯ್ಯ- ಡಿಕೆಶಿ ಜಟಾಪಟಿ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚಿದ ಚಿಂತೆ

ಪ್ರಬಲ ಎದುರಾಳಿ ಇಲ್ಲದಿದ್ದರೂ ಆಡಳಿತದಲ್ಲಿದ್ದ ಕಾಂಗ್ರೆಸ್, ಪ್ರಾದೇಶಿಕ ಪಕ್ಷದ ಮುಂದೆ ಹೀನಾಯ ಸೋಲು ಅನುಭವಿಸಬೇಕಾಯಿತು. ಇಂತಹ ಸ್ಥಿತಿಗೆ ಅಲ್ಲಿನ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚೆನ್ನಿ ಹಾಗೂ ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ನಡುವಿನ ಆಂತರಿಕ ಕಚ್ಚಾಟದಿಂದ ಪಕ್ಷ ಅಧಿಕಾರ ಕಳೆದುಕೊಂಡಿತು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುವ ಕನಸು ಕಂಡಿದೆ, ಇದಕ್ಕೆ ಪೂರಕ ವಾತಾವರಣವೂ ಇದೆ.

ಆದರೆ, ಪಂಜಾಬ್ ಮಾದರಿಯಲ್ಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಡುವೆ ಸಾಮರಸ್ಯವೇ ಇಲ್ಲ.

ಇವರ ಪರಸ್ಪರ ಕಚ್ಚಾಟ ನಿಲ್ಲಿಸಲು ಹೈಕಮಾಂಡ್ ಈಗಾಗಲೇ ಎರಡು ಬಾರಿ ಸಂಧಾನ ಸಭೆಗಳನ್ನು ನಡೆಸಿದೆ, ಆದರೂ **(2ನೇ ಪುಟಕ್ಕೆ)**

## ಪಂಚ ರಾಜ್ಯಗಳ ಫಲಿತಾಂಶದಿಂದ ಸಕಾರಾತ್ಮಕ ಪರಿಣಾಮ: ಸಿಎಂ

ಬೆಂಗಳೂರು, ಮಾ. 10 - ಕರ್ನಾಟಕದ ಮೇಲೆ ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ಸಕಾರಾತ್ಮಕವಾದ ಪರಿಣಾಮ ಬೀರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪಂಚ ರಾಜ್ಯ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ರಾಜ್ಯದಲ್ಲಿ ಪಕ್ಷ ಇನ್ನಷ್ಟು ಶಕ್ತಿ ಶಾಲಿಯಾಗಲಿದೆ ಎಂದರು. ಫಲಿತಾಂಶದಿಂದ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿ, ಪಕ್ಷ ಇನ್ನಷ್ಟು ಶಕ್ತಿ ಶಾಲಿಯಾಗಿ ಮುನ್ನಡೆಯಲಿದೆ ಎಂದವರು ಹೇಳಿದರು.

ನಮ್ಮ ಸರ್ಕಾರ ಬಜೆಟ್‌ನಲ್ಲಿ ಈಗಾಗಲೇ ಘೋಷಿಸಿರುವ ಉತ್ತಮ ಕಾರ್ಯಕ್ರಮಗಳ ಅನುಷ್ಠಾನ ಮುಖಾಂತರ ಸುಭಿಕ್ಷ, ಸುಭದ್ರ ನವ ಕರ್ನಾಟಕ ನಿರ್ಮಾಣ ಮಾಡಿ ತೋರಿಸುತ್ತೇವೆ ಎಂದವರು ತಿಳಿಸಿದರು.

## ಪೊಲೀಸರಿಗೆ ಬಾಡಿ ಕ್ಯಾಮರಾ ಕಡ್ಡಾಯ : ಗೃಹ ಸಚಿವ ಜ್ಞಾನೇಂದ್ರ

ಬೆಂಗಳೂರು, ಮಾ. 10 - ಕಾನೂನು ಸುವ್ಯವಸ್ಥೆ ವಿಭಾಗದಲ್ಲಿ ಕೆಲಸ ಮಾಡುವ ಪೊಲೀಸರು ತಮ್ಮ ಸಮವಸ್ತ್ರದಲ್ಲಿ ಕ್ಯಾಮೆರಾ ಅಳವಡಿಸಿಕೊಳ್ಳುವುದನ್ನು ಕಡ್ಡಾಯ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಪ್ರಶ್ನೋತ್ತರದ ಅವಧಿಯಲ್ಲಿ ಸಲೀಂ ಅಹಮ್ಮದ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕಾರ್ಯನಿರ್ವಹಣೆಯಲ್ಲಿರುವ ಪೊಲೀಸರ ಮೇಲೆ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಇಂತಹ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳದಲ್ಲಿ ಒರಟಾಗಿ ವರ್ತಿಸುತ್ತಾರೆ, ದರ್ಪ ಪ್ರದರ್ಶಿಸುತ್ತಾರೆ ಎಂಬ **(5ನೇ ಪುಟಕ್ಕೆ)**

## ಬಿಜೆಪಿ ಗೆಲುವು: ಜಿಲ್ಲೆಯಲ್ಲಿ ವಿಜಯೋತ್ಸವ



ನಾಲ್ಕು ರಾಜ್ಯಗಳಲ್ಲಿ ಪಕ್ಷ ಗೆದ್ದ ಹಿನ್ನೆಲೆಯಲ್ಲಿ ದಾವಣಗೆರೆ ಜಯದೇವ ವೃತ್ತದಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು

ದಾವಣಗೆರೆ, ಮಾ.10- ಐದು ರಾಜ್ಯಗಳಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಗೆಲವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಜಿಲ್ಲಾ ಘಟಕ ವತಿಯಿಂದ ಗುರುವಾರ ಸಂಜೆ ವಿಜಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಎಸ್.ಎಂ ವೀರೇಶ್ ಹನಗವಾಡಿ ಮಾತನಾಡಿ, ನರೇಂದ್ರ ಮೋದಿಯವರ ಅಭಿವೃದ್ಧಿಯೋಜನೆ, ಕೋರೋನ ಸಂಕಷ್ಟದ ಸಮಯದಲ್ಲಿ ನಿರ್ವಹಣೆ, ಉತ್ತರ ಪ್ರದೇಶದ ಅಭಿವೃದ್ಧಿ ಕಾರ್ಯವನ್ನು ಮೆಚ್ಚಿ ಜನರು ಬಿಜೆಪಿಗೆ ಮತ ನೀಡಿದ್ದಾರೆ. ಬಿಜೆಪಿಯ ಜಯಭೇರಿ ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗಳಿಗೆ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದೆ ಎಂದು ಹೇಳಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಎಸ್. ಜಗದೀಶ್, ವಿಧಾನ ಪರಿಷತ್ ಮಾಜಿ ಸಚೇತಕ ಡಾ. ಎ. ಹೆಚ್ ಶಿವಯೋಗಿಸ್ವಾಮಿ, ದೂಡ ಅಧ್ಯಕ್ಷ ದೇವರಮನೆ ಶಿವಕುಮಾರ್, ಹಾವೇರಿ ಪ್ರಭಾರಿ ಎಲ್.ಎನ್ ಕಲ್ಲೇಶ್, ಜಿಲ್ಲಾ ಉಪಾಧ್ಯಕ್ಷ ಮಂಜನಾಯ್ಕ್, ನಿಕಟ ಪೂರ್ವ ಅಧ್ಯಕ್ಷ ಯಶವಂತ್ ರಾವ್ ಜಾಧವ್, ಪಾಲಿಕೆ ಉಪ **(2ನೇ ಪುಟಕ್ಕೆ)**

## ಎರಡು ರಾಜ್ಯಗಳಲ್ಲಿ ಮಾತ್ರ ಸ್ವಂತ ಅಧಿಕಾರ

### ಕಾಂಗ್ರೆಸ್ ಪ್ರಭಾವ ಈಗ ಅತಿ ಕ್ಷೀಣ

ನವದೆಹಲಿ, ಮಾ. 10 – ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ವೈಫಲ್ಯ ಕಂಡಿರುವ ಕಾಂಗ್ರೆಸ್, ತನ್ನ ಇತಿಹಾಸದಲ್ಲೇ ಅತ್ಯಂತ ಕಡಿಮೆ ರಾಜ್ಯಗಳಲ್ಲಿ ಅಧಿಕಾರ ಉಳಿಸಿಕೊಂಡಿದೆ. ಆಮ್ ಆದ್ಮಿ ಪಾರ್ಟಿ ರೀತಿಯ ಪ್ರಾಂತೀಯ ಪಕ್ಷಗಳ ಸವಾಲು, ಶತಮಾನದ ಇತಿಹಾಸದ ಕಾಂಗ್ರೆಸ್‌ಗೆ ಹೊಸ ಸವಾಲುಗಳನ್ನು ತಂದಿದೆ.

ದಶಕಗಳ ಕಾಲ ದೇಶದ ರಾಜಕೀಯದಲ್ಲಿ ಪ್ರಬಲವಾಗಿದ್ದ ಕಾಂಗ್ರೆಸ್, ಕಳೆದ ದಶಕದಲ್ಲಿ ತೀವ್ರ ಕುಸಿತ ಕಂಡಿದೆ. ಪಂಜಾಬ್‌ನಲ್ಲಿ ಹೀನಾಯ ಸೋಲು ಎದುರಾಗಿದ್ದರೆ, ಉತ್ತರ ಪ್ರದೇಶದ 403 ಸ್ಥಾನಗಳಲ್ಲಿ ಕೇವಲ ಎರಡರಲ್ಲಿ ಗೆಲುವು ಸಾಧ್ಯವಾಗಿದೆ. ಉತ್ತರಾಖಂಡ ಹಾಗೂ ಮಣಿಪುರ ಎರಡರಲ್ಲೂ ಪಕ್ಷಕ್ಕೆ ಸೋಲಾಗಿದೆ.

ರಾಜಸ್ಥಾನ ಹಾಗೂ ಛತ್ತೀಸ್‌ಘಡ ರಾಜ್ಯಗಳಲ್ಲಿ ಮಾತ್ರ ಈಗ ಕಾಂಗ್ರೆಸ್ ಸ್ವಂತ ಬಲದ ಮೇಲೆ ಅಧಿಕಾರದಲ್ಲಿದೆ. ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ಗಳಲ್ಲಿ ಪಕ್ಷ ಆಡಳಿತಾರೂಢ ಮೈತ್ರಿಕೂಟದಲ್ಲಿ ಸಣ್ಣ ಭಾಗವಾಗಿದೆ.

'ಬದಲಾಗಿ, ಇಲ್ಲವೇ ಇದು ಅಂತ್ಯದ ಆರಂಭ' ಎಂದು ಪಕ್ಷದ ಹಲವಾರು ಹಿರಿಯರು ಎಚ್ಚರಿಕೆ ಗಂಟೆ ಬಾರಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಅವರು ನಾಯಕತ್ವದ ವಿಷಯದಲ್ಲಿ ಗಂಭೀರ ಸವಾಲುಗಳನ್ನು ಎದುರಿಸಿದ್ದರು. ಅವರ ಸಹೋದರಿ ಹಾಗೂ ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರ **(2ನೇ ಪುಟಕ್ಕೆ)**

## ಏ.11ರಂದು ಜಗಳೂರಿಗೆ ಸಿಎಂ ಬೊಮ್ಮಾಯಿ

### ಭದ್ರಾ ನೀರಾವರಿ ಯೋಜನೆ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನೆ: ಶಾಸಕ ರಾಮಚಂದ್ರ

ಜಗಳೂರು, ಮಾ. 10- ಭದ್ರಾಮೇಲ್ದಂಡೆ ಯೋಜನೆ ಹಾಗೂ 57 ಕೆರೆ ತುಂಬಿಸುವ ಯೋಜನೆಗಳ ಕಾಮಗಾರಿ ಶಂಕುಸ್ಥಾಪನೆ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನೆಗೆ ಏಪ್ರಿಲ್ 11 ರಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮತ್ತು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರುಗಳು ಆಗಮಿಸಲಿದ್ದು, ಕಾರ್ಯಕ್ರಮ ಯಶಸ್ವಿಗೊಳಿಸಲು ಅಧಿಕಾರಿಗಳಿಗೆ ಶಾಸಕ ಎಸ್. ವಿ.ರಾಮಚಂದ್ರ ಸೂಚಿಸಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ಗುರುವಾರ ಮುಖ್ಯಮಂತ್ರಿ ಆಗಮನದ ಹಿನ್ನೆಲೆಯಲ್ಲಿ ನಡೆದ ಜಿಲ್ಲಾಡಳಿತ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

4 ದಶಕಗಳ ಕನಸಿನ ಯೋಜನೆಯಾದ ಭದ್ರಾ ಮೇಲ್ದಂಡೆ ಯೋಜನೆಗೆ ನಿರಂತರ ಹೋರಾಟ ನಡೆಸಿದ್ದರೂ, ಆಡಳಿತ ಸರ್ಕಾರಗಳ ಬದಲಾವಣೆಯಿಂದ ನೆನೆಗುದಿಗೆ ಬಿದ್ದಿತ್ತು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಆಡಳಿತಾವಧಿಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ್ ಅವರ ಸಹಕಾರದಿಂದ ಯೋಜನೆ ಕೈಗೆತ್ತಿಕೊಳ್ಳ ಲಾಯಿತು. ನಂತರ ಕಾತ್ರಾಳು ಮಾರ್ಗಗೊಂದಲ ಸೃಷ್ಟಿಯಾಗಿತ್ತು ಹರಸಾಹಸದೊಂದಿಗೆ ಮೂಲ ಮಾರ್ಗ ಸಂಗೇನಹಳ್ಳಿ ಮಾರ್ಗ ನಿಗದಿಯಾಗಿದ್ದು, ಯೋಜನೆ ಅಂತಿಮ ಹಂತ ಕ್ಕೆ ಬಂದಿದೆ ಎಂದು ಹೇಳಿದರು.

ರಾಜ್ಯದ ಮೊದಲ ರಾಷ್ಟ್ರೀಯ ಯೋಜನೆಯಾಗಿ ಕೇಂದ್ರ ಸರಕಾರ ಅನುಮೋದನೆಗೊಳಿಸಿದ ಫಲವಾಗಿ ಇದೀಗ 70:30ರ ಅನುಪಾತದಲ್ಲಿ ಅನುದಾನ ಬಿಡುಗಡೆಯಾಗಿ **(5ನೇ ಪುಟಕ್ಕೆ)**

## ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಮತಗಳ ಪಾಲು ಹೆಚ್ಚಳ

ನವದೆಹಲಿ, ಮಾ. 10 – ಪಂಚ ರಾಜ್ಯಗಳ ಚುನಾವಣೆಯಲ್ಲಿ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಗಳಿಸಿದ ಮತಗಳು ಪಾಲು ಹೆಚ್ಚಾಗಿದೆ. ಉತ್ತರಾಖಂಡದಲ್ಲಿ ಮಾತ್ರ ಮತಗಳ ಪ್ರಮಾಣದಲ್ಲಿ ಇಳಿಕೆಯಾಗಿದೆ.

2017ರಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿ ಶೇ.39.67ರಷ್ಟು ಮತ ಪಡೆದಿತ್ತು. ಈ ಬಾರಿ ಅದು ಶೇ.41.8ಕ್ಕೆ ಹೆಚ್ಚಳವಾಗಿದೆ. ಮತಗಳ ಪ್ರಮಾಣದಲ್ಲಿ ಶೇ.2.13ರ ಏರಿಕೆಯಾಗಿದೆ. ಆದರೆ, ಕಳೆದ ಬಾರಿ ಬಿಜೆಪಿ 312 ಸ್ಥಾನಗಳಲ್ಲಿ ಗೆದ್ದಿತ್ತು. ಈ ಬಾರಿ 256 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಸಮಾಜವಾದಿ ಪಕ್ಷ ಗಳಿಸದಿ ಮತಗಳ ಪ್ರಮಾಣ ಶೇ.21.82ರಿಂದ ಶೇ.32.02ಕ್ಕೆ ಹೆಚ್ಚಾಗಿದೆ. ಅದು ಗಳಿಸಿದ ಸ್ಥಾನಗಳ ಸಂಖ್ಯೆ 110 ಆಗಿದೆ.

ಬಿ.ಎಸ್.ಪಿ. ಗಳಿಸಿದ ಮತಗಳ ಪ್ರಮಾಣ ಶೇ.22.23ರಿಂದ ಶೇ.12.66ಕ್ಕೆ ಇಳಿಕೆಯಾಗಿದ್ದು, ಕೇವಲ ಒಂದು ಸೀಟು ಗಳಿಸಲು ಮಾತ್ರ ಸಾಧ್ಯವಾಗಿದೆ. ಕಾಂಗ್ರೆಸ್ ಗಳಿಸಿದ ಮತಗಳ ಪ್ರಮಾಣ ಶೇ.6.25ರಿಂದ ಶೇ.2.4ಕ್ಕೆ ಇಳಿಕೆಯಾಗಿದೆ.

ಉತ್ತರಾಖಂಡದಲ್ಲಿ ಮಾತ್ರ ಬಿಜೆಪಿ ಮತಗಳ ಪ್ರಮಾಣ 2017ರಲ್ಲಿ ಶೇ.46.5 ಇದ್ದದ್ದು, ಈ ಬಾರಿ ಶೇ.44.3ಕ್ಕೆ ಇಳಿಕೆಯಾಗಿದೆ. ಪಕ್ಷ ಗಳಿಸಿದ ಸೀಟುಗಳ ಸಂಖ್ಯೆ 57ರಿಂದ 48ಕ್ಕೆ ಕುಸಿತವಾಗಿದೆ. ಉತ್ತರಾಖಡದಲ್ಲಿ ಕಾಂಗ್ರೆಸ್ ಗಳಿಸಿದ ಮತಗಳ ಪ್ರಮಾಣ ಹೆಚ್ಚಾಗಿದೆ. ಕಳೆದ ಬಾರಿ ಪಕ್ಷ 11 ಸ್ಥಾನ ಗಳಿಸಿದ್ದರೆ, ಈ ಬಾರಿ **(5ನೇ ಪುಟಕ್ಕೆ)**

## ರಂಗಭೂಮಿಯ ವೀರಯ್ಯ ಸ್ವಾಮಿ ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ



ಬೆಂಗಳೂರು, ಮಾ.10- ಕರ್ನಾಟಕ ನಾಟಕ ಅಕಾಡೆಮಿಯು 2021ನೇ ಸಾಲಿನ ತನ್ನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಜೀವಮಾನ ರಂಗ ಸಾಧನೆಗಾಗಿ ದಾವಣಗೆರೆಯ ಹಿರಿಯ ರಂಗಭೂಮಿ ಕಲಾವಿದ ಕೆ.ವೀರಯ್ಯ ಸ್ವಾಮಿ ಅವರಿಗೆ ಪ್ರಶಸ್ತಿ ಲಭಿಸಿದೆ.

ವೀರಯ್ಯ ಸ್ವಾಮಿ ಅವರಲ್ಲದೇ, ದಾವಣಗೆರೆ ಜಿಲ್ಲೆಯ ಜಿ.ಪಿ. ಯಮನೂರ ಸಾಬ್, ಹಾವೇರಿ ಜಿಲ್ಲೆಯ ಶಾಂತಪ್ಪ **(2ನೇ ಪುಟಕ್ಕೆ)**



ಶ್ಯಾಬನೂರಿನಲ್ಲಿ ನಾಳೆ
ಆಂಜನೇಯ ರಥೋತ್ಸವ
ದಿನಾಂಕ 12ರ ಶನಿವಾರ ರಥೋತ್ಸವ
ದಿನಾಂಕ 13ರ ಭಾನುವಾರ ಬೆಲ್ಲದ ಬಂಡಿ
ದಿನಾಂಕ 14ರ ಸೋಮವಾರ ಓಕುಳಿ
ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...
ಶ್ರೀ ಆಂಜನೇಯ ಸ್ವಾಮಿ
ದೇವಸ್ಥಾನ ಕಮಿಟಿ, ಶ್ಯಾಬನೂರು.

## ಪಂಜಾಬ್ ಪರಿಸ್ಥಿತಿ ಆದೀತು

**(1ನೇ ಪುಟದಿಂದ)** ಪ್ರಯೋಜನವಾಗಿಲ್ಲ.

ಶಿವಕುಮಾರ್ ಯಾರ ವಿಶ್ವಾಸವನ್ನೂ ಪಡೆಯದೆ ಪಕ್ಷವನ್ನು ತಮ್ಮ ಮನಬಂದಂತೆ ಮುನ್ನಡೆಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಆಪ್ತರ ಬಳಿ ನೇರವಾಗಿ ಆರೋಪಗಳನ್ನು ಮಾಡಿದ್ದಾರೆ.

ಇವರ ನಡೆಯಿಂದ ಪಕ್ಷಕ್ಕೆ ಹಿನ್ನಡೆಯಾಗಲಿದೆ, ನನ್ನನ್ನೂ ಸೇರಿದಂತೆ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಎಲ್ಲಾ ವಿಷಯಗಳಲ್ಲೂ ಏಕಾಂಗಿ ನಿರ್ಧಾರ ಕೈಗೊಂಡು ಮುನ್ನಡೆಯುತ್ತಾರೆ, ನಾವು ವಿಧಿಯಿಲ್ಲದೆ ಕೈ ಜೋಡಿಸಬೇಕಾಗಿದೆ, ಅವರ ಹೋರಾಟಗಳಿಂದ ಪಕ್ಷಕ್ಕೆ ಯವುದೇ ಪ್ರಯೋಜನ ಇಲ್ಲ ಎಂದು ಸಿದ್ದರಾಮಯ್ಯ ಹೇಳಿಕೊಳ್ಳುತ್ತಿದ್ದಾರೆ.

ಇದಾವುದನ್ನೂ ಲೆಕ್ಕಿಸದೆ ಶಿವಕುಮಾರ್, ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಬೀದಿಗಳಿದು ಹೋರಾಟ ನಡೆಸಲು ಕಾರ್ಯಕ್ರಮಗಳನ್ನು ಮಾತ್ರ ಹಮ್ಮಿಕ್ಕೊಳ್ಳುತ್ತಿದ್ದಾರೆ. ಇವರಿಬ್ಬರ ನಡೆ, ಪಕ್ಷದ ಇತರ ನಾಯಕರು ಮತ್ತು ಕಾರ್ಯಕರ್ತರಲ್ಲಿ ಗೊಂದಲ ಉಂಟು ಮಾಡಿದೆ.

ನಮಗಿರುವ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವ ಬದಲು, ಈ ನಾಯಕರ ಆಂತರಿಕ ಕಚ್ಚಾಟ ದೊರೆಯಲಿರುವ ಅಧಿಕಾರವೂ ದೊರೆಯದಂತಾಗಲಿದೆ ಎಂಬ ಭಾವನೆ ಬರುತ್ತಿದೆ.

ಶಿವಕುಮಾರ್ ಅವರಿಗೆ ಹಳೆ ಮೈಸೂರಿನಲ್ಲೂ ಪ್ರಾಬಲ್ಯವಿಲ್ಲ, ತುಮಕೂರಿನಿಂದೀಚೆಗೆ ಅವರನ್ನು ಕೇಳುವವರಿಲ್ಲ. ಉತ್ತರ ಕರ್ನಾಟಕ ಭಾಗದಲ್ಲಿ ಸಿದ್ದರಾಮಯ್ಯ ಅವರಿಗೆ ಪ್ರತಿ ಕ್ಷೇತ್ರದಲ್ಲೂ ಬೆಂಬಲವಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳುವ ಬದಲು ವ್ಯಕ್ತಿ ಪ್ರತಿಷ್ಠೆ ಮತ್ತು ಮುಖ್ಯಮಂತ್ರಿ ಪಟ್ಟಕ್ಕಾಗಿ ಅಧಿಕಾರ ಬರುವ ಮುನ್ನವೇ ಪಕ್ಷವನ್ನು ತುಳಿಯಲಾಗುತ್ತಿದೆ ಎಂಬ ಮಾತುಗಳೂ ಕೇಳಿ ಬರುತ್ತಿವೆ. ಇವರು ತಮ್ಮ ಧೋರಣೆಗಳನ್ನು ಸರಿಪಡಿಸಿಕೊಳ್ಳದಿದ್ದದರೆ, ಪಂಜಾಬ್ ಸ್ಥಿತಿಯೇ ಇಲ್ಲೂ ಎದುರಾಗಲಿದೆ ಎಂಬ ಮಾತುಗಳೂ ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿವೆ.

## ಸ್ವಾಮಿಗೆ ನಾಟಕ ಅಕಾಡೆಮಿ ಪ್ರಶಸ್ತಿ

**(1ನೇ ಪುಟದಿಂದ)** ರುದ್ರಗೌಡ ಜಾಲಿಕೋನಿ, ಚಿತ್ರದುರ್ಗ ಜಿಲ್ಲೆಯ ಶ್ರೀಮತಿ ಟಿ. ವಿಮಲಾಕ್ಷಿ, ಶಿವಮೊಗ್ಗ ಜಿಲ್ಲೆಯ ಪ್ರೊ. ಎಸ್.ಸಿ. ಗೌರಿಶಂಕರ ಅವರುಗಳೂ ಸೇರಿದಂತೆ, ಒಟ್ಟು 23 ಸಾಧಕರಿಗೆ ವಾರ್ಷಿಕ ರಂಗ ಪ್ರಶಸ್ತಿ ನೀಡಲಾಗಿದೆ.

ದತ್ತಿ ಪುರಸ್ಕಾರಗಳ ಪೈಕಿ ನಟ ರತ್ನ ಚಿಂದೋಡಿ ವೀರಪ್ಪನವರ ದತ್ತಿ ನಿಧಿ ಪುರಸ್ಕಾರವನ್ನು ಬೆಂಗಳೂರು ನಗರ ಜಿಲ್ಲೆಯ ಜಲಮಂಡಳಿ ಆರ್. ರಾಮಚಂದ್ರ, ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ನಿಧಿ ಪುರಸ್ಕಾರ ಪ್ರಶಸ್ತಿಯನ್ನು ಕಲಬುರ್ಗಿ ಜಿಲ್ಲೆಯ ಶ್ರೀಮತಿ ಸೀತಾ ಚಂದ್ರಕಾಂತ ಮಲ್ಲಾಬಾದಿ ಅವರಿಗೆ ನೀಡಲಾಗಿದೆ. ಯುವ ರಂಗ ಪ್ರಶಸ್ತಿಯನ್ನು ಬೆಳಗಾವಿ ಜಿಲ್ಲೆಯ ಮಹಾಂತೇಶ ರಾಮದುರ್ಗ ಅವರಿಗೆ ಕೊಡಲಾಗಿದೆ ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಪ್ರೊ. ಆರ್. ಭೀಮಸೇನ, ರಿಜಿಸ್ಟರ್ (ಪ್ರ) ಬಿ. ಮಂಜುನಾಥ ಆರಾಧ್ಯ ಅವರು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

# ಹರಿಹರ : ಊರಮ್ಮ ದೇವಿ ಹಬ್ಬಕ್ಕೆ ಚುರುಕಾದ ಕುರಿ ಸಂತೆ







ಹರಿಹರ, ಮಾ. 10 - ನಗರದ ಇದೇ ದಿನಾಂಕ 22 ರಿಂದ 26 ರವರಿಗೆ ನಡೆಯುವ ಕಸಬಾ ಮತ್ತು ಮಾಜೇನಹಳ್ಳಿ ಗ್ರಾಮದೇವತೆ ಊರಮ್ಮದೇವಿಯ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಣೆಗೆ ಸಾರ್ವಜನಿಕರು ಮುಂದಾಗಿದ್ದು, ಹಬ್ಬದ ಆಚರಣೆಗೆ ಮಂಗಳವಾರ ಕುರಿ ಸಂತೆಯಲ್ಲಿ ಕುರಿ ಖರೀದಿಗೆ ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರಿಂದ, ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆದಿದೆ.

66 ಹಳ್ಳಿಗಳ ಒಡತಿ ಶ್ರೀ ಗ್ರಾಮದೇವತೆ ಊರಮ್ಮದೇವಿಯ ಹಬ್ಬವನ್ನು ಇದೇ ದಿನಾಂಕ 22 ರಿಂದ 26 ರವರಿಗೆ ಅದ್ದೂರಿಯಾಗಿ ಆಚರಣೆಗೆ ಉತ್ಸವ ಸಮಿತಿಯ ವತಿಯಿಂದ ಎಲ್ಲಾ ರೀತಿಯ ಸಿದ್ದತೆ ಜೋರಾಗಿ ನಡೆಯುತ್ತಿದೆ.

ಕಳೆದ ಹಲವು ವರ್ಷದಿಂದ ಕೊರೊನ ರೋಗವು ಬಂದಾಗಿನಿಂದ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡಿದ್ದರು ಸಹ, ಹಬ್ಬದ ಆಚರಣೆಯಲ್ಲಿ ಜನರಿಗೆ ಉತ್ಸಾಹವೇನು ಕಡಿಮೆಯಾದಂತೆ ಕಾಣುತ್ತಿಲ್ಲ. ಹಿಂದಿನಿಂದಲೂ ಹಿರಿಯರು ಮಾಡಿಕೊಂಡು ಬಂದಿರುವ ಸಂಪ್ರದಾಯಯಕ್ಕೆ ಚ್ಯುತಿ ಆಗಬಾರದೆಂದು, ದೇವರಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿರುವ ಹಿನ್ನೆಲೆಯಲ್ಲಿ ಹಬ್ಬದ ಆಚರಣೆ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ.

ಸಾರ್ವಜನಿಕರು ತಮ್ಮ ನೆಂಟರಿಷ್ಟರು, ಗೆಳೆಯರಿಗೆ, ಬಂಧುಗಳಿಗೆ ಮತ್ತು ಸಂಬಂಧಿಕರಿಗೆ ಜೊತೆಗೆ ಅಭಿಮಾನಿಗಳಿಗೆ ಹಬ್ಬಕ್ಕೆ ಆಹ್ವಾನಿಸುವುದು ವಾಡಿಕೆ. ಆಗಮಿಸಿದವರಿಗೆ ಹೋಳಿಗೆ, ಬೂಂದಿ, ಜಿಲೇಬಿ, ಸಿಹಿ ಊಟ ಮಾಡಿದರೆ, ಇನ್ನೂ ಕೆಲವೊಂದು ಧರ್ಮದಲ್ಲಿ ಪ್ರಮುಖವಾಗಿ ಕುರಿ, ಕೋಳಿ, ಮೇಕೆ ಊಟಕ್ಕೆ ಮೊದಲು ಆದ್ಯತೆ ನೀಡಲಾಗುತ್ತದೆ. ಆಗಾಗಿ ನಿನ್ನ ನಡೆದ ಕುರಿ, ಕೋಳಿ ಸಂತೆಯಲ್ಲಿ ಸಾರ್ವಜನಿಕರು ಕುರಿ ಮತ್ತು ಕೋಳಿ ಕೊಳ್ಳಲು ಹೆಚ್ಚಿನ ಪ್ರಮಾಣದಲ್ಲಿ ಮುಗಿ ಬಿದ್ದದ್ದು ಕಂಡುಬಂದಿತು.

ಕುರಿ ಮಾರುಕಟ್ಟೆಯಲ್ಲಿ ಜವಾರಿ ಕುರಿ, ನಾಟಿ ತಳಿಗಳ ಕುರಿ, ಬನ್ನೂರು ಕುರಿ, ಉಡ್ಡಿ ಕಾಳಗದ ಕುರಿಗಳಿಗೆ ಬೇಡಿಕೆಯ ಪ್ರಮಾಣವು ಹೆಚ್ಚಾಗಿರು ವುದು ಕಂಡುಬಂದಿತು. ಮಾರುಕಟ್ಟೆಯಲ್ಲಿ ಜವಾರಿ ಕುರಿ, ನಾಟಿ ತಳಿಯ ಕುರಿ ಬನ್ನುರು ಕುರಿಗಳ ದರವು ಸುಮಾರು 10 ಸಾವಿರದಿಂದ 40 ಸಾವಿರ ರೂಪಾಯಿವರೆಗೆ ನಡೆದರೆ, ಕಾಳಗದ ಕುರಿಗಳಿಗೆ 60 ಸಾವಿರದಿಂದ 1 ಲಕ್ಷ ರೂಪಾಯಿ ದರವನ್ನು ಕೊಟ್ಟು ಕೊಂಡು ಕೊಳ್ಳುತ್ತಿದ್ದರು. ಇನ್ನೂ ಮೇಕೆ ವ್ಯಾಪಾರ15 ರಿಂದ 30 ಸಾವಿರದವರೆಗೂ ನಡೆದು, ಕೋಳಿ ವ್ಯಾಪಾರ ಸಹ 200 ರೂ.ಗಳಿಂದ 1 ಸಾವಿರ ರೂ.ಗಳ ವಹಿವಾಟು ನಡೆಯಿತು.

### ಕುರಿ ಸಾಕುವುದು ಕಷ್ಟವಾಗಿದೆ

**ಕುರಿಗಳನ್ನು ಸಾಕುವುದು ಬಹಳ ಕಷ್ಟವಾಗಿದೆ. ಒಂದು ಕುರಿ ಸಾಕಲು ಒಂದರಿಂದ ಎರಡು ವರ್ಷಗಳ ಸಮಯ ಬೇಕು. ಕುರಿಗಳ ಪಾಲನೆ ಮತ್ತು ಆಹಾರಕ್ಕೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಆದರೆ, ಮಾರಾಟ ಮಾಡುವಾಗ ಗ್ರಾಹಕರು ಬಾಯಿಗೆ ಬಂದಂತೆ ಕೇಳುತ್ತಾರೆ. ಇದರಿಂದಾಗಿ ಕುರಿ ಸಾಕಾಣಿಕೆ ಮಾಡಿ ವ್ಯಾಪಾರ ವಹಿವಾಟು ನಡೆಸುವುದನ್ನು ಕೈ ಬಿಡಬೇಕು ಅನಿಸುತ್ತದೆ ಎಂದು ಕುರಿ ವ್ಯಾಪಾರಿಗಳಾದ ಸಾರಥಿ ಮಂಜಪ್ಪ, ದುರಗಪ್ಪ, ಹನುಮಂತಪ್ಪ, ಸಿದ್ದಪ್ಪ ಹೇಳಿದ್ದಾರೆ.**

### ಕುರಿ ಬೇಕೆಂದರೂ ಖರ್ಚಿನ ಯೋಚನೆ

**ಈ ಬಾರಿ ನಗರದಲ್ಲಿ ಗ್ರಾಮದೇವತೆ ಊರಮ್ಮ ದೇವಿಯ ಜಾತ್ರೆಗೆ ಸಾಕಷ್ಟು ಪ್ರಮಾಣದಲ್ಲಿ ಕುರಿಗಳು ಮಾರುಕಟ್ಟೆಗೆ ಬಂದಿವೆ. ಆದರೆ, ದರ ಹೆಚ್ಚಾಗಿದ್ದು, ಕೊರೊನ ಸಮಯದಲ್ಲಿ ದುಡಿಮೆ ಪ್ರಮಾಣ ಕಡಿಮೆಯಾಗಿರುವುದಕ್ಕೆ ಆರು ಕುರಿಗಳನ್ನು ಖರೀದಿ ಮಾಡುತ್ತಿದ್ದ ನಾವು ನಾಲ್ಕು ಕುರಿ ಖರೀದಿಸಿದ್ದೇವೆ ಎಂದು ಮಂಜಣ್ಣ ಮೂಸುಳೆ ಗ್ರಾಹಕ ಹೇಳಿದರು.**

### ಬಿಜೆಪಿಯಿಂದ 2024ರ ಚುನಾವಣಾ ರಣಕಹಳೆ

# ರಾಷ್ಟ್ರೀಯ ಪಕ್ಷವಾಗುವ ಹಾದಿಯಲ್ಲಿ ಆಮ್ ಆದ್ಮಿ ಪಾರ್ಟಿ

ನವದೆಹಲಿ, ಮಾ. 10 – ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ತನ್ನ ಆಡಳಿತ ಇರುವ ಎಲ್ಲಾ ನಾಲ್ಕು ರಾಜ್ಯಗಳಲ್ಲಿ ಜಯಭೇರಿ ಬಾರಿಸಿದೆ. ಆಡಳಿತ, ಹಿಂದುತ್ವ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನಪ್ರಿಯತೆ ಗೆಲುವಿಗೆ ಕಾರಣವಾಗಿದ್ದು, 2024ರ ಲೋಕಸಭಾ ಚುನಾವಣೆಗೆ ಭರ್ಜರಿ ರಣಕಹಳೆ ಊದಿದೆ. 2017ರಲ್ಲೂ ಸಹ ಬಿಜೆಪಿ ಇದೇ ರೀತಿಯ ಗೆಲುವು ಸಾಧಿಸಿ, 2019ರ ಲೋಕಸಭಾ ಚುನಾವಣೆಯಲ್ಲಿ ಅದೇ ಭರಾಟೆ ಮುಂದುವರೆಸಿತ್ತು.

ದೆಹಲಿಯಲ್ಲಿ ದಾಪುಗಾಲಿಟ್ಟಿದ್ದ ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಾರ್ಟಿ, ಪಂಜಾಬ್‌ನಲ್ಲಿ ಅಭೂತಪೂರ್ವ ಜನಾದೇಶ ಪಡೆದಿದೆ. ಗೋವಾದಲ್ಲಿ ತನ್ನ ಕಾಲಿಸಿರಿದೆ. ರಾಷ್ಟ್ರೀಯ ಪಕ್ಷವಾಗುವ ಹಾದಿಯಲ್ಲಿರುವ ಆಮ್ ಆದ್ಮಿ ಪಾರ್ಟಿ, ಪ್ರತಿಪಕ್ಷಗಳ ಪಾಳೆಯದಲ್ಲಿ ಸಂಚಲನ ಮೂಡಿಸಿದೆ.

ಪತನದ ಹಾದಿಯಲ್ಲಿ ಕಾಂಗ್ರೆಸ್ ಮುಂದುವರೆದಿದ್ದರೆ, ಪ್ರಾಂತೀಯ ಪಕ್ಷಗಳು ಅಸ್ತಿತ್ವ ತೋರಿಸಿಕೊಂಡಿವೆ. ಉತ್ತರ ಪ್ರದೇಶದಲ್ಲಿ ಬಿಜೆಪಿ ವಿರೋಧಿ ಮತ ಸಂಗ್ರಹಿಸುವಲ್ಲಿ ಸಮಾಜವಾದಿ ಪಕ್ಷ ಯಶಸ್ವಿಯಾಗಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಪೂರ್ಣಾವಧಿ ಮುಗಿಸಿದ ನಂತರ ಇನ್ನೊಂದು ಅವಧಿಗೆ ಜನಾದೇಶ ಪಡೆದುಕೊಂಡಿದ್ದಾರೆ. ಮೂರು ದಶಕಗಳ ನಂತರ ಉತ್ತರ ಪ್ರದೇಶದಲ್ಲಿ ಈ ಸಾಧನೆ ಮಾಡಿದ ಮೊದಲ ಮುಖ್ಯಮಂತ್ರಿ ಅವರಾಗಿದ್ದಾರೆ.

ಉತ್ತರ ಪ್ರದೇಶದಲ್ಲಿ ಯೋಗಿ ವರ್ಚಸ್ಸು ಹೆಚ್ಚಾಗುತ್ತಿರುವಂತೆಯೇ, ಬಿಜೆಪಿಯ ಅತ್ಯುನ್ನತ ನಿರ್ಧಾರ ಸಮಿತಿಯಾದ ಸಂಸದೀಯ ಮಂಡಳಿಯಲ್ಲಿ ಅವರು ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಾಗಿದೆ.

ಬಿಜೆಪಿ ಮತದಾರರನ್ನು ಸೆಳೆಯಲು ಮೋದಿ ವರ್ಚಸ್ಸು ಅನಿವಾರ್ಯ ಎಂಬುದನ್ನು ಪಂಚ ರಾಜ್ಯಗಳ ಚುನಾವಣೆ ಮತ್ತೊಮ್ಮೆ ತೋರಿಸಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಉತ್ತರ ಪ್ರದೇಶದ ಉತ್ತರಾಖಂಡದಲ್ಲೂ ಇದೇ ಮೊದಲ ಬಾರಿಗೆ ಆಡಳತಾರೂಢ ಬಿಜೆಪಿ ಸರ್ಕಾರ ಉಳಸಿಕೊಂಡಿದೆ. ಗೋವಾದಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಹೆಚ್ಚಿನ ಜನಾದೇಶದೊಂದಿಗೆ ಅಧಿಕಾರಕ್ಕೆ ಬಂದಿದೆ.

ಮತದಾರರಿಗೆ ಅಸಮಾಧಾನಗಳಿರಬಹುದು, ಆದರೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೇ ದೇಶ ನಡೆಸಲು ಸೂಕ್ತ ವ್ಯಕ್ತಿ ಎಂಬ ಭರವಸೆ ಇದೆ ಎಂಬುದನ್ನು ಚುನಾವಣೆಗಳು ತೋರಿಸಿವೆ. ಡಬಲ್ ಇಂಜಿನ್ ಸರ್ಕಾರ ಎಂದು ಮೋದಿ ಪದೇ ಪದೇ ಹೇಳುತ್ತಿರುವುದು ಜನರ ಮೇಲೆ ಪ್ರಭಾವ ಬೀರಿದೆ.

ಉತ್ತರಾಖಂಡ ಹಾಗೂ ಗೋವಾಗಳಲ್ಲಿ ಆಡಳಿತ ವಿರೋಧಿ ಅಲೆ ಬಲವಾಗಿದೆ ಎಂಬ ಭಾವನೆ ಇತ್ತು. ಆದರೆ, ಪರಿಸ್ಥಿತಿಯ ಲಾಭ ಪಡೆಯಲು ಕಾಂಗ್ರೆಸ್ ವಿಫಲವಾಗಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಆಮ್ ಆದ್ಮಿ ಪಾರ್ಟಿ ಪಂಜಾಬ್‌ನಲ್ಲಿ ಗೆಲುವು ಸಾಧಿಸಿದ ಬೆನ್ನಲ್ಲೇ, ಅದರ ರಾಷ್ಟ್ರೀಯ ಮಹಾತ್ವಾಕಾಂಕ್ಷೆ ಗರಿ ಗೆದರಿದೆ. ಅರವಿಂದ ಕೇಜ್ರಿವಾಲ್ ಪ್ರಧಾನ ಮಂತ್ರಿ ಸ್ಥಾನಕ್ಕೆ ಬರಬೇಕೆಂಬ ಪಕ್ಷದ ಕಾರ್ಯಕರ್ತರ ಕನಸಿಗೆ ರೆಕ್ಕೆಗಳು ಬಂದಿವೆ. ಪಕ್ಷದ ಈ ಮಹತ್ವಾಕಾಂಕ್ಷೆ ಪ್ರತಿಪಕ್ಷಗಳ ಪಾಳೆಯದಲ್ಲಿ ಚಟುವಟಿಕೆ ಗರಿಗೆದರಲು ಕಾರಣವಾಗಲಿದೆ. ಮೂರ್ನಾಲ್ಕು ಪ್ರಧಾನ ಮಂತ್ರಿ ಆಕಾಂಕ್ಷಿಗಳಿರುವ ಪ್ರತಿಪಕ್ಷಗಳ ಪಾಳೆಯದ ಎದುರು, ಬಿಜೆಪಿ ಭದ್ರವಾಗಿ ಕುಳಿತಿದೆ.

## ಪಂಜಾಬ್‌ಗೆ ಪೊರಕೆ, ಉತ್ತರಕ್ಕೆ ಬುಲ್ಡೋಜರ್

**(1ನೇ ಪುಟದಿಂದ)** ಮಹತ್ವ ಪಡೆದಿದೆ.

ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮೂರು ದಶಕಗಳ ನಂತರ ಆಡಳಿತಾರೂಢ ಪಕ್ಷವೊಂದಕ್ಕೆ ಮತ್ತೆ ಗೆಲುವು ತರುವಲ್ಲಿ ಯಶಸ್ವಿಯಾಗಿದ್ದಾರೆ. 2017ರ ಮಾದರಿ ಭರ್ಜರಿ ಜನಾದೇಶ ದೊರೆತಿಲ್ಲವಾದರೂ, ಸಮಾಜವಾದಿ ಪಕ್ಷದ ಕಠಿಣ ಹೋರಾಟ ಮೆಟ್ಟಿ ನಿಂತಿದ್ದಾರೆ.

ಹಿಂದುತ್ವ ಹಾಗೂ ರಾಷ್ಟ್ರೀಯವಾದವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದ ಆದಿತ್ಯನಾಥ್, 2017ರಲ್ಲಿ ಮುಖ್ಯಮಂತ್ರಿಯಾಗಿ ಪಕ್ಷ ತಮ್ಮನ್ನು ಆಯ್ಕೆ ಮಾಡಿದ್ದು ಸೂಕ್ತವಾಗಿದೆ ಎಂಬುತನ್ನು ಸಾಬೀತು ಪಡಿಸಿದ್ದಾರೆ. ಭೂಗತರ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡು 'ಬುಲ್ಡೋಜರ್ ಬಾಬಾ' ಎಂದೇ ಹೆಸರಾಗಿದ್ದ ಆದಿತ್ಯನಾಥ್, ಕೃಷಿ ಹೋರಾಟದ ನಡುವೆಯೂ ಬಿಜೆಪಿ ಮತಬ್ಯಾಂಕ್ ಗಟ್ಟಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಉತ್ತರಾಖಂಡ, ಗೋವಾ ಹಾಗೂ ಮಣಿಪುರಗಳಲ್ಲೂ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾಗಿದೆ. ಆದರೆ, ನಾಲ್ಕು ರಾಜ್ಯಗಳಲ್ಲಿ ಗೆಲುವು ಸಾಧಿಸಲು ಮೋದಿ ಬಲವೇ ನಿರ್ಣಾಯಕ ಎಂಬುದೂ ಸಾಬೀತಾಗಿದೆ.

ಉತ್ತರಾಖಂಡದಲ್ಲಿ ಮೊದಲ ಬಾರಿ ಆಡಳಿತಾರೂಢ ಪಕ್ಷ ಅಧಿಕಾರ ಉಳಿಸಿಕೊಂಡಿದೆ. ಆದರೆ, ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸೋಲು ಕಂಡಿದ್ದಾರೆ.

ಗೋವಾದಲ್ಲಿ ಬಿಜೆಪಿ ಸತತ ಮೂರನೇ ಬಾರಿ ಅಧಿಕಾರಕ್ಕೆ ಬಂದಿದೆ. ಕಳೆದ ಬಾರಿಗಿಂತಲೂ ಹೆಚ್ಚಿನ ಸ್ಥಾನ ಪಡೆಯುವಲ್ಲಿ ಪಕ್ಷ ಯಶಸ್ವಿಯಾಗಿದೆ.

ಉತ್ತರಪ್ರದೇಶದಷ್ಟೇ ರಾಜಕೀಯ ಮಹತ್ವ ಪಡೆಯಬಹುದಾದ ಜನಾದೇಶ ಪಂಜಾಬ್‌ನಲ್ಲಿ ದೊರೆತಿದ್ದು, ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಾರ್ಟಿ ಅಭೂತಪೂರ್ವ ಗೆಲುವು ದಾಖಲಿಸಿದೆ.



ಸಾಂಪ್ರದಾಯಿಕ ಪಕ್ಷಗಳಾದ ಕಾಂಗ್ರೆಸ್ ಹಾಗೂ ಶಿರೋಮಣಿ ಅಕಾಲಿ ದಳಗಳನ್ನು ಮೂಲೆಗುಂಪು ಮಾಡಿರುವ ಆಮ್ ಆದ್ಮಿ ಪಾರ್ಟಿ, 90ಕ್ಕೂ ಹೆಚ್ಚು ಸ್ಥಾನಗಳಲ್ಲಿ ಜಯ ದಾಖಲಿಸಿದೆ.

ಮೊದಲ ಬಾರಿಗೆ ಆಮ್ ಆದ್ಮಿ ಪಾರ್ಟಿ ಪೂರ್ಣ ರಾಜ್ಯವೊಂದರಲ್ಲಿ ಅಧಿಕಾರ ನಡೆಸಲಿದೆ. ದೆಹಲಿ ಕೇಂದ್ರಾಡಳಿತ ಪ್ರದೇಶವಾಗಿತ್ತು.

ದೆಹಲಿ ಮಾದರಿಯ ಆಡಳಿತ ನೀಡುವುದಾಗಿ ಕೇಜ್ರಿವಾಲ್ ನೀಡಿರುವ ಭರವಸೆಗೆ ಪಂಜಾಬ್ ಮತದಾರ ಬೆಂಬಲಿಸಿದ್ದಾನೆ. ಭಗವಂತ ಮಾನ್ ಅವರು ರಾಜ್ಯದ ಮುಂದಿನ ಮುಖ್ಯಮಂತ್ರಿಯಾಗಲಿದ್ದಾರೆ.

ಆಮ್ ಆದ್ಮಿ ಪಾರ್ಟಿಯ ಪೊರಕೆ ಪ್ರಭಾವ ಪಂಜಾಬ್ ಮೇಲೆ ಯಾವ ರೀತಿ ಬೀರಿದೆ ಎಂದರೆ, ಹಾಲಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ತಾವು ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಸೋತಿದ್ದಾರೆ. ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಹಾಗೂ ಮಾಜಿ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಸೇರಿದಂತೆ ಘಟಾನುಘಟಿಗಳಿಗೆ ಸೋಲಾಗಿದೆ.

## 2 ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಸ್ವಂತ ಅಧಿಕಾರ

**(1ನೇ ಪುಟದಿಂದ)** ಅವರು ವಿಧಾನಸಭಾ ಚುನಾವಣೆಗಳಲ್ಲಿ ವ್ಯಾಪಕ ಪ್ರಚಾರ ಮಾಡಿದರೂ ನಿರೀಕ್ಷಿತ ಫಲಿತಂಶ ದೊರೆತಿಲ್ಲ.

ಪಂಜಾಬ್‌ನಲ್ಲಿ ಆಗಿನ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರನ್ನು ಅವಮಾನ ತರುವ ರೀತಿಯಲ್ಲಿ ಹೊರ ಹಾಕಿ ದಲಿತ ಮುಖಂಡ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರಲಾಗಿತ್ತು. ಆದರೆ, ಈ ಬದಲಾವಣೆ ಪಕ್ಷಕ್ಕೆ ನೆರವಾಗದೇ, ಆಮ್ ಆದ್ಮಿ ಪಾರ್ಟಿ ಗೆಲುವಿನ ಹಾದಿ ಸುಗಮ ಮಾಡಿತು.

ಸೋಲಿನ ನಂತರ ಹೇಳಿಕೆ ನೀಡಿರುವ ಪಕ್ಷದ ಹಿರಿಯ ನಾಯಕ ಶಶಿ ಥರೂರ್, ಸಂಘಟನೆಯಲ್ಲಿ ಸುಧಾರಣೆ ಆಗಬೇಕಿದೆ. ಯಶಸ್ಸು ಗಳಿಸಬೇಕಾದರೆ ಬದಲಾವಣೆ ಅನಿವಾರ್ಯ ಎಂದಿದ್ದಾರೆ. ಬದಲಾವಣೆ ಪರವಾಗಿರುವ ಜಿ-23 ನಾಯಕರು ಶೀಘ್ರದಲ್ಲೇ ಸಭೆ ಸೇರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅರವಿಂದ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಾರ್ಟಿ ಈಗಾಗಲೇ ಕಾಂಗ್ರೆಸ್ ಪಕ್ಷದಿಂದ ಎರಡು ರಾಜ್ಯಗಳನ್ನು ಕಸಿದಿದೆ. ಹೀಗಾಗಿ ಪ್ರಮುಖ ವಿರೋಧ ಪಕ್ಷ ಎಂಬ ಸ್ಥಾನವೂ ಪಟ್ಟವೂ ಕಾಂಗ್ರೆಸ್ ಪಾಲಿಗೆ ಅಭದ್ರವಾಗಿದೆ. ಎರಡು ರಾಜ್ಯಗಳಲ್ಲಿ ಅಧಿಕಾರ ಹೊಂದಿರುವ ಏಕೈಕ ಪ್ರಾಂತೀಯ ಪಕ್ಷ ಆಮ್ ಆದ್ಮಿ ಪಾರ್ಟಿಯಾಗಿದೆ.

ಕಾಂಗ್ರೆಸ್ ಪಕ್ಷ ಈಗ ಅಸ್ತಿತ್ವದ ಕೊನೆಯ ಹಂತದಲ್ಲಿದೆ. ಈಗಿನ ನಾಯಕತ್ವ ಬೇರು ಮಟ್ಟದಲ್ಲಿ ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬಲು ವಿಫಲವಾಗಿದೆ ಎಂಬ ಮಾತುಗಳು ಕಾಂಗ್ರೆಸ್ ಪಕ್ಷದ ಕೆಲವರಿಂದ ಕೇಳಿ ಬರುತ್ತಿವೆ.

ಕಾಂಗ್ರೆಸ್ ಪಕ್ಷದ ಅಂತ್ಯ ಆರಂಭವಾಗಿದೆ. ಆಮ್ ಆದ್ಮಿ ಪಾರ್ಟಿ ಹಾಗೂ ತೃಣಮೂಲ ಕಾಂಗ್ರೆಸ್ ಮೂಲಕ ಪರ್ಯಾಯ ರಾಜಕೀಯ ಚಿತ್ರಣ ಮೂಡಿ ಬರುತ್ತಿದೆ ಎಂದು ಕಾಂಗ್ರೆಸ್ ಮಾಜಿ ನಾಯಕ ಅಶ್ವಿನಿ ಕುಮಾರ್ ಹೇಳಿದ್ದಾರೆ. ಇದಕ್ಕೂ ಮುಂಚೆ ನಡೆದ ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಪುದುಚೆರಿ ಚುನಾವಣೆಗಳಲ್ಲೂ ಕಾಂಗ್ರೆಸ್ ಸಾಧನೆ ನಿರಾಶಾದಾಯಕವಾಗಿತ್ತು. ತಮಿಳುನಾಡಿನಲ್ಲಿ ಡಿಎಂಕೆ ಜೊತೆ ಕಾಂಗ್ರೆಸ್ ಮೈತ್ರಿ ಹೊಂದಿದೆ.

ಸೋಲಿನ ನಂತರ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಜನಾದೇಶವನ್ನು ವಿನಯದಿಂದ ಒಪ್ಪಿಕೊಳ್ಳುತ್ತೇನೆ. ಫಲಿತಾಂಶದಿಂದ ಕಲಿಯುತ್ತೇವೆ ಎಂದಿದ್ದಾರೆ.

ಆತ್ಮಾವಲೋಕನ ಮಾಡಿಕೊಳ್ಳುವುದಾಗಿ ಹೇಳಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ, ಚುನಾವಣೆ ಸೋತಿದ್ದೇವೆಯೇ ಹೊರತು ಧೈರ್ಯವನ್ನಲ್ಲ. ಹೊಸ ತಂತ್ರಗಾರಿಕೆಯೊಂದಿಗೆ ಮತ್ತೆ ಪುಟಿದೆದ್ದು ಬರುತ್ತೇವೆ ಎಂದಿದ್ದಾರೆ.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಅಸ್ತಿತ್ವದ ಬಿಕ್ಕಟ್ಟು ಎದುರಿಸಬಹುದು. ಪ್ರತಿ ಚುನಾವಣೆಯಲ್ಲೂ ಬಿಜೆಪಿ ಬಲವಾಗುತ್ತಿದೆ. ಜೊತೆಗೆ ಇತರೆ ಪ್ರತಿಪಕ್ಷಗಳು ಬಲವಾಗುತ್ತಿರುವುದು, ಜನರಿಗೆ ಹೊಸ ಆಯ್ಕೆ ನೀಡುತ್ತಿವೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

## ಬಿಜೆಪಿ ಗೆಲುವು : ಜಿಲ್ಲೆಯಲ್ಲಿ ವಿಜಯೋತ್ಸವ

**(1ನೇ ಪುಟದಿಂದ)** ಮೇಯರ್ ಗಾಯಿತ್ರಿಬಾಯಿ, ಪಾಲಿಕೆ ಸದಸ್ಯರುಗಳಾದ ಎಲ್. ಡಿ. ಗೋಣಪ್ಪ, ಕೆ.ಎಂ.ವೀರೇಶ್, ಎಸ್. ಟಿ. ವೀರೇಶ್, ಸೋಗಿ ಶಾಂತಕುಮಾರ್, ಶಿವಪ್ರಕಾಶ್, ನರೇಂದ್ರಕುಮಾರ್, ಯೋಗೀಶ್, ಜಿಲ್ಲಾ ಖಜಾಂಚಿ ಬಾತಿ ವೀರೇಶ್, ಜಿಲ್ಲಾ ವಕ್ತಾರ ಶಿವಶಂಕರ್ ಜಿಲ್ಲಾ ಮಾಧ್ಯಮ ಸಂಚಾಲಕ ವಿಶ್ವಾಸ್ ಹೆಚ್.ಪಿ., ಜಿಲ್ಲಾ ಸಾಮಾಜಿಕ ಜಾಲತಾಣದ ಸಂಚಾಲಕ ಕೊಟ್ರೇಶ್ ಗೌಡ, ರಾಜ್ಯ ಗೋ ರಕ್ಷಕ ಸಂಚಾಲಕ ಬಿ.ಟಿ ಸಿದ್ದಪ್ಪ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಂಡಲ ಅಧ್ಯಕ್ಷರುಗಳಾದ ಸಂಗನಗೌಡ್ರು, ದೇವೇಂದ್ರಪ್ಪ ಶ್ಯಾಗಲೆ, ಹನುಮಂತಪ್ಪ, ಬಸವರಾಜಯ್ಯ, ರಾಜು ಶಾಮನೂರು, ರಾಜೇಶ್, ಮಹೇಂದ್ರ ಹೆಬ್ಬಾಳ್, ಓಂಕಾರಪ್ಪ, ರವಿನಾಯ್ಕ್, ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳ ಮಹೇಶ್, ಪ್ರಧಾನ ಕಾರ್ಯದರ್ಶಿ ಪುಷ್ಪವಾಲಿ, ಭಾಗ್ಯ ಪಿಸಾಳೆ, ಜ್ಯೋತಿ, ಶಾಂತದೋರೆ, ಶಾರದ ರಾಯ್ಕರ್, ಶ್ರೀನಿವಾಸ್ ಇತರರು ಉಪಸ್ಥಿತರಿದ್ದರು.

## ಗೋವಿನಹಾಳು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಶಾಂತರಾಜು



ಮಲೇಬೆನ್ನೂರು, ಮಾ.10- ಗೋವಿನಹಾಳು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಿ.ಎಮ್.ಶಾಂತರಾಜು ಮತ್ತು ಉಪಾಧ್ಯಕ್ಷರಾಗಿ ಕಮಲಮ್ಮ ಅವರನ್ನು ಗುರುವಾರ ನಡೆದ ಸಭೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಜಿ.ಕೆ. ಹನುಮಗೌಡ್ರು, ಬಿ.ಎಮ್.ರುದ್ರಗೌಡ್ರು, ಕೆ.ಭರಮಗೌಡ್ರು, ಕುಬೇರಗೌಡ್ರು ಬಣಕಾರ, ಕೆ.ಜಿ.ರಾಜು ಮತ್ತಿತರರು ಉಪಸ್ಥಿತರಿದ್ದರು.

## ನಾಳೆ 'ಕಂದಾಯ ದಾಖಲೆ ಮನೆ ಬಾಗಿಲಿಗೆ'

**(1ನೇ ಪುಟದಿಂದ)** ಒಂಭತ್ತು ಜನ ವಾಪಸ್ ಬಂದಿದ್ದಾರೆ. ಇನ್ನಿಬ್ಬರು ಬರುವ ಹಾದಿಯಲ್ಲಿದ್ದಾರೆ. ಈಗ ಉಕ್ರೇನ್‌ನಲ್ಲಿ ಜಿಲ್ಲೆಯ ಯಾರೂ ಇಲ್ಲ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

**ಮಾ.17ರಿಂದ ಜನಸ್ಪಂದನ :** ಕೊರೊನಾ ನಂತರ ಸ್ಥಗಿತಗೊಳಿಸಲಾಗಿದ್ದ ಜನಸ್ಪಂದನ ಕಾರ್ಯಕ್ರಮವನ್ನು ಮಾ.17ರಿಂದ ಪುನರಾರಂಭಿಸಲಾಗುವುದು. ಹದಿನೈದು ದಿನಗಳಿಗೊಮ್ಮೆ ಜನಸ್ಪಂದನ ನಡೆಯಲಿದೆ. ಅರ್ಜಿಗಳ ವಿಲೇವಾರಿ ಬಗ್ಗೆ ನಿರಂತರ ಪರಿಶೀಲನೆ ಮಾಡಲಾಗುವುದು ಎಂದು ಬೀಳಗಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಹಾಗೂ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಸುಶ್ರುತ್ ಶಾಸ್ತ್ರಿ ಉಪಸ್ಥಿತರಿದ್ದರು.

### ಬೀದಿ ವ್ಯಾಪಾರಿಗಳು ಸಾಲ ಮರು ಪಾವತಿಸಲು ಕರೆ

**ವ್ಯಾಪಾರಿಗಳಿಗೆ ಸಾಲ ನೀಡಲು ವಿಶೇಷ ಅಭಿಯಾನ**

ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯಡಿ ಜಿಲ್ಲೆಯ 5,289 ಬೀದಿ ವ್ಯಾಪಾರಿಗಳಿಗೆ 10 ಸಾವಿರ ರೂ. ಸಾಲ ವಿತರಣೆ ಮಾಡಲಾಗಿದೆ. ಆದರೆ, ಸಾಲ ಪಡೆದ ಸಾಕಷ್ಟು ಜನರು ಮರು ಪಾವತಿ ಮಾಡಿಲ್ಲ. ಮರು ಪಾವತಿ ಮಾಡದೇ ಇದ್ದರೆ, ಅದು ಸಿಬಿಲ್ ಸ್ಕೋರ್ ಮೇಲೆ ಪರಿಣಾಮ ಬೀರಿ, ಮುಂದಿನ ಬಾರಿ ಸಾಲ ಪಡೆಯುವಾಗ ತೊಡಕಾಗುತ್ತದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ. ಸಾಲ ಮರು ಪಾವತಿ ಮಾಡಿದವರು ಮುಂದಿನ ಹಂತದಲ್ಲಿ 20 ಸಾವಿರ ರೂ., ಆನಂತರದಲ್ಲಿ ಇನ್ನೂ ಹೆಚ್ಚು ಸಾಲ ಪಡೆಯಲು ಅವಕಾಶ ಇದೆ. ಹೀಗಾಗಿ ಸಾಲ ಮರು ಪಾವತಿ ಮಾಡಬೇಕು ಎಂದವರು ತಿಳಿಸಿದರು. ಬೀದಿ ವ್ಯಾಪಾರಿಗಳಿಗೆ 7,289 ಜನರು ಅರ್ಜಿ ಸಲ್ಲಿಸಿದ್ದರು. ಇವರಲ್ಲಿ 6,072 ಜನರಿಗೆ ಮಂಜೂರಾಗಿದ್ದು, 5,289 ಜನ ಸಾಲ ಪಡೆದಿದ್ದಾರೆ. ಜಿಲ್ಲೆಯ ಉಳಿದ ಉಳಿದ ಬೀದಿ ವ್ಯಾಪಾರಿಗಳಿಗೆ ಸಾಲ ನೀಡಲು ಅಭಿಯಾನ ನಡೆಸಲಾಗುವುದು ಎಂದು ಹೇಳಿದರು.


## ಪುಣ್ಯಸ್ಮರಣೆ



**ದಿ|| ಸವನೂರು ವೀರಪ್ಪನವರು**

**ನಿಧನ : 11.03.1978**


ತಮ್ಮ ಸ್ಮರಣೆಯಲ್ಲಿರುವ....

ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು, ಸವನೂರು ವಂಶಸ್ಥರು ಹಾಗೂ ಬಂಧುಗಳು

**ಎಸ್.ವಿ.ಸಿ. ಪ್ಲಾಜಾ, ದಾವಣಗೆರೆ.**

|| ಶ್ರೀ ವಿಶ್ವಕರ್ಮ ಪರಬ್ರಹ್ಮಣೇ ನಮಃ || || ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಇ.ಡಬ್ಲ್ಯೂ.ಎಸ್. ಕಾಲೋನಿ ವಾಸಿ

**ವಿಶ್ವ ಬ್ರಾಹ್ಮಣರಾದ ಶ್ರೀ ಮಂಜುನಾಥಚಾರ್ ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 01.3.2022ರ ಮಂಗಳವಾರ ರಾತ್ರಿ 11.50ಕ್ಕೆ ನನ್ನ ಧರ್ಮಪತ್ನಿ

**ಶ್ರೀಮತಿ ನಿರ್ಮಲಾ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ವೈಕುಂಠ ಸಮಾರಾಧನೆಯನ್ನು** **ದಿನಾಂಕ 12.3.2022ರ ಶನಿವಾರ ಮಧ್ಯಾಹ್ನ 1.00 ಕ್ಕೆ ಎ.ಸಿ.ಎಂ ಶಾಲೆ ಹತ್ತಿರ ದೇವರಾಜ ಅರಸ್ ಬಡಾವಣೆ 3ನೇ ಮೇನ್, 1ನೇ ಕ್ರಾಸ್ 'ಸಿ' ಬ್ಲಾಕ್, 'ಸುಮಂತ ನಿಲಯ' # 293** ಮೃತರ ಇಲ್ಲಿ ನೆರವೇರಿಸಲಾಗುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು ; ಶ್ರೀ ಮಂಜುನಾಥಚಾರ್ ಮತ್ತು ಮಕ್ಕಳು, ಅಳಿಯಂದಿರು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

**ಅಖಿಲ ಭಾರತ ವಿಶ್ವಕರ್ಮ ಪರಿಷತ್ ಪದಧಿಕಾರಿಗಳು ಮೊ: 80956 44007**

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


**ರಕ್ತದಾನ ಶ್ರೇಷ್ಟದಾನ**

### ಪೆದ್ದವತ್ತೂರು ಆದಮ್ಮ ನಿಧನ



ದಾವಣಗೆರೆ ಹೊಂಡದ ಸರ್ಕಲ್ ಕೊಂಡಜ್ಜಿ ರಸ್ತೆ ವಾಸಿ, ಸವಿತಾ ಸಮಾಜದ ನಾರಾಯಣಪ್ಪನವರ ಪತ್ನಿ ಪೆದ್ದವತ್ತೂರು ಆದಮ್ಮ (85) ಇವರು ದಿನಾಂಕ: 10.3.2022 ರ ಗುರುವಾರ ರಾತ್ರಿ 9:30 ಕ್ಕೆ ನಿಧನರಾದರು. ಪತಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ: 11.3.2022 ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ಸಾರ್ವಜನಿಕ ರುಧ್ರಭೂಮಿಯಲ್ಲಿ ನೆರವೇರಲಿದೆ.

# ಉಕ್ರೇನ್-ರಷ್ಯಾ ದಾಳಿ : ಡಿಜಿಟಲ್ ವಾತಾವರಣದ ಮೇಲೂ ಪರಿಣಾಮ

ಪರ್ತ್, ಮಾ. 10 - ಉಕ್ರೇನ್ ಮೇಲೆ ರಷ್ಯಾ ನಡೆಸಿರುವ ದಾಳಿ, ಆ ದೇಶದ ಡಿಜಿಟಲ್ ವಾತಾವರಣದ ಮೇಲೂ ಪರಿಣಾಮ ಬೀರುತ್ತಿದೆ. ಒಂದೆಡೆ ಉಕ್ರೇನ್ ಮೇಲೆ ರಷ್ಯಾ ಭೌತಿಕ ದಾಳಿ ನಡೆಸಿದ್ದರು, ವಿಶ್ವದ ಇತರೆಡೆಗಳಿಂದ ರಷ್ಯಾ ಮೇಲೆ ಸೈಬರ್ ದಾಳಿ ನಡೆಯುತ್ತಿದೆ. ಇದರಿಂದಾಗಿ ರಷ್ಯಾ ಜಾಗತಿಕ ಜಾಲದಿಂದ ಪೂರ್ಣ ಇಲ್ಲವೇ ಭಾಗಶಃ ಹೊರ ಬೀಳುವ ಮಾತುಗಳು ಕೇಳಿ ಬರುತ್ತಿವೆ.

ರಷ್ಯಾ ಮೇಲೆ ಸೈಬರ್ ದಾಳಿ ನಡೆಸಲು ಉಕ್ರೇನ್ ತನ್ನ ನಾಗರಿಕರನ್ನು ಒಳಗೊಂಡ ಐ.ಟಿ. ಸೈನ್ಯ ರೂಪಿಸುತ್ತಿದೆ. ಸೈಬರ್ ಅಪರಾಧಿಗಳೂ ಸಹ ಈ ಸಂಘರ್ಷದಲ್ಲಿ ಧುಮುಕುತ್ತಿದ್ದಾರೆ. ಈ ನಡುವೆಯೇ, ಜಾಗತಿಕವಾಗಿ ರಷ್ಯಾ ಮೇಲೆ ಹೇರಲಾಗುತ್ತಿರುವ ನಿರ್ಬಂಧಗಳು, ಗ್ರಾಹಕರು ಅಂತರ್ಜಾಲ ಬಳಸುವುದರ ಮೇಲೆ ಪರಿಣಾಮ ಬೀರುತ್ತಿವೆ.

**ಅವಲಂಬನೆ ಕಡಿಮೆ :** ರಷ್ಯಾ ಶೀಘ್ರದಲ್ಲೇ ಜಾಗತಿಕ ಅಂತರ್ಜಾಲ ಅವಲಂಬನೆಯನ್ನು ಕಡಿಮೆ ಮಾಡುವ ನಿರೀಕ್ಷೆ ಇದೆ. ಸಂಪೂರ್ಣ ಸಂಪರ್ಕ ಕಡಿದುಕೊಳ್ಳುವ ಕ್ರಮ ಇನ್ನೂ ಖಚಿತವಾಗಿಲ್ಲ. ಆದರೆ, ಭಾಗಶಃವಾಗಿ ಸಂಪರ್ಕ ಕಡಿದುಕೊಳ್ಳುವುದೂ ಕಠಿಣವಾಗಿದೆ. ರಷ್ಯಾ ಅಂತರ್ಜಾಲದಲ್ಲಿ ಏಕಾಂಗಿಯಾದರೆ, ಅದರ ನಾಗರಿಕರು ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ.

ರಷ್ಯಾದ ಶೇ.85ರಷ್ಟು ಜನರು ಇಂಟರ್‌ನೆಟ್ ಬಳಸುತ್ತಿದ್ದಾರೆ. ಉಕ್ರೇನ್ ಮೇಲೆ ದಾಳಿ ಆರಂಭಿಸಿದ ನಂತರ ಫೇಸ್‌ಬುಕ್, ಟ್ವಿಟ್ಟರ್ ಹಾಗೂ ನೆಟ್‌ಫ್ಲಿಕ್ಸ್ ಸೇರಿದಂತೆ ಹಲವು ಸೇವೆಗಳಿಂದ ಜನರು ವಂಚಿತರಾಗಿದ್ದಾರೆ. ಈ ಜಾಲ ತಾಣಗಳ ಮೇಲೆ ರಷ್ಯಾ ನಿರ್ಬಂಧ ಹೇರುತ್ತಿದೆ.

ಆಪಲ್ ಪೇ, ಗೂಗಲ್ ಪೇ ಹಾಗೂ ಪ್ರಮುಖ ಕ್ರೆಡಿಟ್ ಕಾರ್ಡ್ ಸೇವೆಗಳನ್ನು ಕಂಪನಿಗಳು ಸ್ಥಗಿತ ಗೊಳಿಸಿವೆ. ಈ ನಡುವೆಯೇ, ಶುಕ್ರವಾರದಿಂದ ಜಾಗತಿಕ ಅಂತರ್ಜಾಲದಿಂದ ಹಿಂದೆ ಸರಿಯುವು ದಕ್ಕೆ ಚಾಲನೆ ನೀಡುವುದಾಗಿ ರಷ್ಯಾ ಹೇಳಿದೆ.

ಸರ್ಕಾರಿ ಮಾಧ್ಯಮಗಳ ಮೇಲೆ ರಷ್ಯಾ ನಿಯಂತ್ರಣ ಹೊಂದಿದೆ. ಆದರೆ, ಅಂತರ್ಜಾಲ ವನ್ನು ಬಹುತೇಕ ಮುಕ್ತವಾಗಿರಿಸಲಾಗಿತ್ತು. ಈಗ ಹಂತ ಹಂತವಾಗಿ ಅಂತರ್ಜಾಲದಲ್ಲೂ ನಿರ್ಬಂಧ ಹೆಚ್ಚಾಗುತ್ತಿದೆ. ನಿರ್ಬಂಧಗಳ ನಡುವೆಯೂ ಅಂತರ್ಜಾಲ ಸಂಪರ್ಕ ಪಡೆಯಲು ನಾಗರಿಕರಿಗೆ ಸಮಸ್ಯೆಯಾಗಿಲ್ಲ.

ಈಗ ಮುಕ್ತ ಸಂಪರ್ಕವನ್ನು ಕಡಿತಗೊಳಿಸಲಾಗುತ್ತಿದೆ. ಅಂತರ್ಜಾಲ ಸೇವೆ ಮೇಲೆ ರಷ್ಯಾ ಹಿಡಿತ ಹೊಂದಲಿದೆ. ರಷ್ಯಾದ ಪ್ರಚಾರ ಅಭಿಯಾನ ಬಲಪಡಿಸಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

**ಸೇವೆ ರಷ್ಯಾಗೆ ವರ್ಗಾವಣೆ :** ನಿಯಂತ್ರಣದ ಭಾಗವಾಗಿ, ವೆಬ್ ಹೋಸ್ಟಿಂಗ್ ಹಾಗೂ ವಹಿವಾಟು ಸೇವೆ ಒದಗಿಸುವ ಕಂಪನಿಗಳು ತಮ್ಮ ಸೇವೆಗಳನ್ನು ರಷ್ಯಾಗೆ ವರ್ಗಾಯಿಸ ಬೇಕೆಂದು ನಿರ್ದೇಶನ ನೀಡಲಾಗಿದೆ.

ಸಾಕಷ್ಟು ಸಂಸ್ಥೆಗಳು ಇದುವರೆಗೂ ದೂರದ ಪ್ರದೇಶಗಳಿಂದ ಸೇವೆ ಒದಗಿಸುತ್ತಿವೆ. ವಿಶ್ವದ ಹಲವಾರು ಸರ್ವರ್‌ಗಳ ಮೂಲಕ ಸೇವೆ ಒದಗಿಸುವುದು ಕಡಿಮೆ ವೆಚ್ಚದಾಯಕ ವಾಗಿದೆ. ಸೇವೆಯನ್ನು ಸರುಕ್ಷಿತವಾಗಿಟ್ಟು ಕೊಳ್ಳಲೂ ಈ ಕ್ರಮ ನೆರವಾಗುತ್ತದೆ.

ಈಗ ಪ್ರತಿಯೊಂದು ವೆಬ್ ತಾಣವನ್ನು ರಷ್ಯಾಗೆ ವರ್ಗಾಯಿಸುವುದು ಅತ್ಯಂತ ಕಠಿಣ ಕೆಲಸವಾಗಿದೆ. ರಷ್ಯಾ ಬಳಿ ಈ ರೀತಿಯ ಸೇವೆ ನಿರ್ವಹಿಸುವ ಸಾಮರ್ಥ್ಯ ಇರುವುದೂ ಅನುಮಾನ.

ಪಶ್ಚಿಮದ ಒತ್ತಡಕ್ಕೆ ಸಿಲುಕಿರುವ ರಷ್ಯಾ, ಚೀನಾ ರೀತಿಯಲ್ಲಿ ತನ್ನದೇ ಆದ ಫೈರ್‌ವಾಲ್ ಹೊಂದಿದೆ. ಫೈರ್‌ವಾಲ್ ಮೂಲಕ ಚೀನಾ ಅಂತರ್ಜಾಲದ ಮೇಲೆ ಬಿಗಿ ಹಿಡಿತ ಹೊಂದುವುದು ಸಾಧ್ಯವಾಗಿದೆ.

ಪ್ರಸಕ್ತ ಕಂಪನಿಗಳು ವೆಬ್ ತಾಣಗಳು ಹಾಗೂ ಸೇವೆಗಳನ್ನು ರಷ್ಯಾಗೆ ವರ್ಗಾಯಿಸಲು ಮಾತ್ರ ತಿಳಿಸಲಾಗಿದೆ. ಇದು ಜಾಗತಿಕವಾಗಿ ಅಂತರ್ಜಾಲ ಸಂಪರ್ಕ ಕಡಿತಗೊಳಿಸುವ ಮೊದಲ ಹಂತ ಆಗಬಹುದಾಗಿದೆ.

**ಅವಲಂಬನೆ ಅನಿವಾರ್ಯ :** ರಷ್ಯಾ ದೇಶೀಯ ಇಂಟರ್‌ನೆಟ್ ಹೊಂದಿದರೂ ಸಹ, ಕೆಲ ಸೇವೆಗಳಿಗೆ ಮತ್ತು ಬೇರೆ ದೇಶಗಳ ಸಂಪರ್ಕಕ್ಕೆ ಜಾಗತಿಕ ಇಂಟರ್‌ನೆಟ್ ಅಗತ್ಯ ಬರಲಿದೆ.

2019ರಲ್ಲಿ ರಷ್ಯಾ ಅಂತರರಾಷ್ಟ್ರೀಯ ಇಂಟರ್‌ನೆಟ್ ಸಂಪರ್ಕ ಕಡಿತ ಮಾಡುವ ಪರೀಕ್ಷೆ ನಡೆಸಿತ್ತು. ಈ ಪರೀಕ್ಷೆ ಎಷ್ಟು ಕಾಲ ನಡೆಯಿತು ಎಂಬುದು ಸ್ಪಷ್ಟವಾಗಿಲ್ಲ.

ಈ ಪರೀಕ್ಷೆ ಯಶಸ್ವಿಯಾಯಿತಾದರೂ, ಅದನ್ನು ಅಳವಡಿಸಿಕೊಂಡಿರಲಿಲ್ಲ. ಸಾಮಾಜಿಕ ಜಾಲತಾಣ ಹಾಗೂ ಹಣಕಾಸು ಸಂಪರ್ಕಗಳ ಕಾರಣದಿಂದಾಗಿ ಅಂತರ್ಜಾಲ ಪೂರ್ಣ ಸಂಪರ್ಕ ಕಡಿತಗೊಂಡಿರಲಿಲ್ಲ ಎನ್ನಲಾಗಿದೆ.

ಪ್ರಸಕ್ತ ಜಾಗತಿಕ ಜಾಲತಾಣಗಳಿಂದ ರಷ್ಯಾ ವೇಗವಾಗಿ ಏಕಾಂಗಿಯಾಗುತ್ತಿದೆ. ಹೀಗಾಗಿ ಇಂಟರ್‌ನೆಟ್ ಮೇಲೆ ಪೂರ್ಣ ನಿಯಂತ್ರಣ ಹೊಂದುವುದು ಹೆಚ್ಚು ಸುಲಭವಾಗಲಿದೆ.

**ಪ್ರಗತಿ ಕುಂಠಿತ :** ಜಾಗತಿಕ ಅಂತರ್ಜಾಲ ಸಂಪರ್ಕ ಕಡಿದುಕೊಳ್ಳುವುದು ಹಾಗೂ ಸೆನ್ಸಾರ್ ಮಾಡುವುದರಿಂದ ರಷ್ಯಾದ ದೇಶೀಯ ಡಿಜಿಟಲ್ ಪ್ರಗತಿ ಕುಂಠಿತವಾಗಲಿದೆ. ಇದು ರಷ್ಯಾದ ತಾಂತ್ರಿಕ ಬೆಳವಣಿಗೆ ಮೇಲೂ ಪರಿಣಾಮ ಬೀರಲಿದೆ.

ರಷ್ಯಾ ಈಗಾಗಲೇ ಚಿಪ್ ಕೊರತೆ ಹಾಗೂ ಆಧುನಿಕ ದೂರಸಂಪರ್ಕ ಸಾಧನಗಳ ಕೊರತೆ ಎದುರಿಸುತ್ತಿದೆ. ರಷ್ಯಾ ತನ್ನದೇ ಆದ ಪ್ರತ್ಯೇಕ ಅಂತರ್ಜಾಲ ಹೊಂದಿದರೂ, ಜನರು ಅದನ್ನು ಸ್ವೀಕರಿಸುವುದು ಸವಾಲಾಗಿದೆ.

ಇತ್ತೀಚಿನವರೆಗೂ ರಷ್ಯಾದ ಜನರು ಜಾಗತಿಕ ಇಂಟರ್‌ನೆಟ್ ಸೌಲಭ್ಯ ಪಡೆಯುತ್ತಿದ್ದರು. ಹಠಾತ್ತನೆ ಸಂಪರ್ಕ ಕಡಿತವಾದರೆ ಜನರಿಗೆ ಸಮಸ್ಯೆಗಳು ಎದುರಾಗಲಿವೆ.

ಈ ನಡುವೆ, ರಷ್ಯಾ ಹಾಗೂ ಪಶ್ಚಿಮದ ದೇಶಗಳ ನಡುವಿನ ಡಿಜಿಟಲ್ ಸಂಘರ್ಷ ಮತ್ತೊಂದು ಹಂತಕ್ಕೆ ಹೋಗುವ ಸಾಧ್ಯತೆ ಇದೆ. ಈ ಹಿಂದೆಯೂ ಹಲವಾರು ಇಂಟರ್‌ನೆಟ್ ದಾಳಿಗಳ ಮೂಲ ರಷ್ಯಾ ಎಂದು ಹೇಳಲಾಗುತ್ತಿತ್ತು. ಮುಂಬರುವ ದಿನಗಳಲ್ಲಿ ಈ ದಾಳಿಯ ಪ್ರಮಾಣ ಹೆಚ್ಚಾಗುವ ಸಾಧ್ಯತೆಯೂ ಇದೆ.

## ಸ್ವಂತ ಹಣದಲ್ಲಿ ಕಾಲುವೆ ಹೂಳು ತೆಗೆಸಲು ಮುಂದಾದ ಪೂಜಾರ್



ಮಲೇಬೆನ್ನೂರು

ಮಲೇಬೆನ್ನೂರು, ಮಾ.10- ದೇವರಬೆಳಕೆರೆ ಪಿಕಪ್ ಡ್ಯಾಂನಿಂದ ಕುಣೆಬೆಳಕೆರೆ, ನಂದಿತಾವರೆ, ಎಕ್ಕೆಗೊಂದಿ, ಭಾನುವಳ್ಳಿ ಗ್ರಾಮಗಳ ರೈತರಿಗೆ ನೀರು ತಲುಪಿಸುವ ಕಾಲುವೆ ಸ್ವಚ್ಛಗೊಳಿಸುವ ಕಾಮಗಾರಿಗೆ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಶುಕ್ರವಾರ ಚಾಲನೆ ನೀಡಿದರು.

ಕಳೆದ 8-10 ವರ್ಷಗಳಿಂದ ಹೂಳು ತುಂಬಿಕೊಂಡಿದ್ದ ಈ ಕಾಲುವೆಯನ್ನು ಸ್ವಚ್ಛ ಮಾಡಿಸುವಂತೆ ಈ ಭಾಗದ ರೈತರು ನೀರಾವರಿ ಇಲಾಖೆಗೆ ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಸಹ ಕಾಮಗಾರಿ ಆಗಿರಲಿಲ್ಲ. ರೈತರ ಮನವಿ ಮೇರೆಗೆ ನನ್ನ ಸ್ವಂತ ಹಣದಲ್ಲಿ ಸುಮಾರು 5 ಕಿ.ಮೀ ಕಾಲುವೆಯ ಹೂಳು ತೆಗೆಸಲು ಈ ದಿನ ನಂದಿತಾವರೆಯಲ್ಲಿ ರೈತರ ಸಮ್ಮುಖದಲ್ಲಿ ಚಾಲನೆ ನೀಡಿದ್ದೇನೆಂದು ಚಂದ್ರಶೇಖರ್ ಪೂಜಾರ್ ತಿಳಿಸಿದರು.

ಕಾಲುವೆ ಹೂಳು ತೆಗೆಸುವಂತೆ ನಾನೂ ಸಹ ನೀರಾವರಿ ಇಲಾಖೆಯ ಇಂಜಿನಿಯರ್ ಜೊತೆ ಮಾತನಾಡಿದ್ದೆ. ಅನುದಾನ ಕೊರತೆಯಿಂದಾಗಿ ತಕ್ಷಣವೇ ಈ ಕೆಲಸ ಆಗಲ್ಲ ಎಂದು ಹೇಳಿದರು.

ಈಗಾಗಲೇ ನಾಟಿ ಮಾಡಿರುವ ಈ ಭಾಗದ ರೈತರಿಗೆ ಬೇಸಿಗೆ ಕಾಲ ಆಗಿರುವುದರಿಂದ ನೀರು ಬಹಳ ಮುಖ್ಯವಾಗಿರುವುದರಿಂದ 3 ಲಕ್ಷ ರೂ. ವೆಚ್ಚದಲ್ಲಿ ಇಟಾಚಿಯಿಂದ ಕಾಮಗಾರಿ ಮಾಡಿಸಲು ತೀರ್ಮಾನಿಸಿ, ಕಾಮಗಾರಿ ಆರಂಭಿಸಿದ್ದೇನೆಂದು ಚಂದ್ರಶೇಖರ್ ಪೂಜಾರ್ ವಿವರಿಸಿದರು.

ನಂದಿತಾವರೆಯ ಎನ್.ಪಿ.ಬಸಲಿಂಗಪ್ಪ, ವೈ.ಸುರೇಶ್, ವೈ.ಸಂತೋಷ್, ಗದಿಗೆಪ್ಪ, ಹರೀಶ್, ಸುರೇಶ್, ಎಕ್ಕೆಗೊಂದಿಯ ಚಂದ್ರಪ್ಪ, ಜೆಸಿಬಿ ಸುರೇಶ್ ಸೇರಿದಂತೆ ಭಾನುವಳ್ಳಿ, ಎಕ್ಕೆಗೊಂದಿ, ನಂದಿತಾವರೆ, ಕುಣೆಬೆಳಕೆರೆ ರೈತರು ಈ ವೇಳೆ ಹಾಜರಿದ್ದು, ಪೂಜಾರ್ ಅವರನ್ನು ಅಭಿನಂದಿಸಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶೇಖರಪ್ಪ ನಗರ ಮಸೀದಿ ಹಿಂಭಾಗ, ರಂಭಾಪುರಿ ರಸ್ತೆ, ಮಹಾವೀರ ಭವನ, ಆರ್‌ಎಮ್‌ಸಿ ಲಿಂಕ್ ರಸ್ತೆ, ಗುಜರಿ ಲೈನ್, ಬಂಬೂ ಬಜಾರ್, ಬಿ.ಟಿ. ಲೇಔಟ್, ಎಲ್‌ಬಿಎಸ್ ನಗರ, ಆನೆಕೊಂಡ, ಇಮಾಂ ನಗರ, ಬಿಡಿಓ ಆಫೀಸ್, ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋ ಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸ ಮಸೀದಿ ಹಿಂಭಾಗ, ಬೀಡಿ ಲೇಔಟ್, ಅಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫ ನಗರ ಸ್ವಲ್ಪಭಾಗ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್, ಜಗಳೂರು ರಸ್ತೆ, ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಅರಳೀಮರದ ಸರ್ಕಲ್, ಬೇತೂರ್ ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಆವರಗೆರೆ ವಿದ್ಯುತ್ ಉಪಕೇಂದ್ರದಿಂದ ಪಿಬಿ ರಸ್ತೆ ರವಿ ಮಿಲ್ ಎದುರುಗಡೆ, ರೈಲ್ವೇ ಅಂಡರ್‌ಬ್ರಿಡ್ಜ್ ಹತ್ತಿರ, ಎಪ್‌ಪಿಎಮ್‌ಸಿ ಆವರಣ, ಶೇಖರಪ್ಪ ನಗರ 'ಬಿ' ಬ್ಲಾಕ್ ಒಳಗಡೆ, ಭಾರತ್ ಕಾಲೋನಿ ಗೇಟ್ ಹತ್ತಿರ, ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಗೋಶಾಲೆ, ಪಿ.ಬಿ ರಸ್ತೆ, ರವಿ ಮಿಲ್ ಕ್ವಾರ್ಟಸ್, ಮಹೀಂದ್ರಾ ಶೋ ರೂಂ ಹತ್ತಿರ ಇರುವ ವರ್ಕ್‌ಷಾಪ್‌ಗಳು, ಕಾಮತ್ ಹೋಟೆಲ್ ಅಕ್ಕಪಕ್ಕ, ಸುಭಾಷ್ ರಿಫ್ರೆಶ್ ಮೆಂಟ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್.ಟಿ.ಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್.ಪಿ.ಎಸ್ ನಗರ 2 ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ ಹಾಗೂ ಟೀಚರ್ಸ್ ಕಾಲೋನಿ ಇತರೆ ಪ್ರದೇಶಗಳು.

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಮ್ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಕಬಳಿಸಿದ ಜಾಗ ಹಿಂತಿರುಗಿಸಲು ಮನವಿ



ದಾವಣಗೆರೆ, ಮಾ. 10- ಹೊಸಕುಂದವಾಡ ಗ್ರಾಮದ ಆಂಜಿನಪ್ಪ ಎಂಬುವವರಿಂದ ಅಂಗನವಾಡಿ ಕೇಂದ್ರ ಹಾಗೂ ಹಿಟ್ಟಿನ ಗಿರಣಿ ಇರುವ ಸರ್ಕಾರಿ ಜಾಗವನ್ನು ಕಬಳಿಸಿದ್ದು, ಅದನ್ನು ಬಿಡಿಸಿ ಕೊಡುವಂತೆ ಗ್ರಾಮಸ್ಥರು ಇಂದು ಜಿಲ್ಲಾಡಳಿತ, ನಗರಾಡಳಿತ, ತಾಲ್ಲೂಕು ಅಡಳಿತಕ್ಕೆ ಮನವಿ ಸಲ್ಲಿಸಿದರು.

ಅಂಜಿನಪ್ಪ ಎಂಬುವವರು ಸರ್ಕಾರಿ ಜಾಗ ಡೋರ್ ನಂ. 219ರಲ್ಲಿ ಸರ್ಕಾರಿ ಪಂಚಾಯ್ತಿ ಹಿಟ್ಟಿನ ಗಿರಣಿ ಮತ್ತು ಡೋರ್ ನಂ. 220ರಲ್ಲಿ ಪಂಚಾಯ್ತಿ ವಾಸದ ಮನೆ 'ಎಂದು ನಮೂದಾಗಿದ್ದು, ಅಧಿಕಾರಿಗಳು ಮತ್ತು ಇತರೆಯವರು ಸೇರಿ ಜಾಗವನ್ನು ಖಾತೆ ಬದಲಾವಣೆ ಮಾಡಿಸಿ ಕೊಂಡಿದ್ದಾರೆ. ಅವರ ಹಳೇ ನಂಬರಿನ ಜೊತೆಗೆ ಸರ್ಕಾರ ಜಾಗವನ್ನು ಮತ್ತು ಅಳತೆ ಯನ್ನು ಸೇರಿಸಿ ಬರೆಯಿಸಿಕೊಂಡಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ಸರ್ಕಾರಿ ಜಾಗವನ್ನು ಇದೇ ಊರಿನ ಹನುಮಂತಪ್ಪ ಎಂಬುವವರಿಗೆ ಮುಂಗಡ ಹಣ ಪಡೆದು, ಸರ್ಕಾರಿ ಜಾಗವನ್ನು ಬರೆದುಕೊಟ್ಟಿದ್ದಾರೆ. ಕುಂದುವಾಡ ಗ್ರಾಮದಲ್ಲಿ ಸುಮಾರು 7 ಎಕರೆ 16 ಗುಂಟೆ ಜಮೀನು ನಮ್ಮ ತಾತನವರಿಗೆ ಸೇರಿದ್ದು ಎಂದು ಪತ್ರಿಕೆ ಪಕಟಣೆ ಹೊರಡಿಸಿರುತ್ತಾರೆ. ಈಗಾಗಲೇ ಗಾಮಸ್ಥರುಗಳು ತಮ್ಮ ತಮ್ಮ ಖಾತೆಯಲ್ಲಿರುವ ಕಂದಾಯವನ್ನು ಸುಮಾರು ವರ್ಷಗಳಿಂದ ಭರಿಸಿರುತ್ತಾರೆ. ಆದ್ದರಿಂದ ತಾವುಗಳು ಈ ಸರ್ಕಾರಿ ಜಾಗವನ್ನು ಬಿಡಿಸಿಕೊಡಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಸೀಲ್ದಾರ್, ನಗರ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದ್ದಜ್ಜಿ ಅವರಿಗೆ ಕೋರಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ರಾಮಪ್ಪ, ಬಸನಗೌಡ್ರ, ಶಿವಕುಮಾರ್, ಲೋಕೇಶ್, ಮಹೇಶಪ್ಪ, ಅಣ್ಣಪ್ಪ, ವಿರುಪಣ್ಣ, ಹನುಮಂತಪ್ಪ, ಹೇಮಂತ್, ಲೋಹಿತ್ ಸೇರಿದಂತೆ ಇತರರು ಇದ್ದರು.

## ಡಾ. ಹೆಚ್.ಎಫ್. ಕಟ್ಟೀಮನಿ ಪ್ರೌಢ ಶಿಕ್ಷಣ ಪ್ರತಿಷ್ಠಾನದಿಂದ ಪುಸ್ತಕ ವಿತರಣೆ

ದಾವಣಗೆರೆ, ಮಾ.10- ಡಾ.ಹೆಚ್.ಎಫ್. ಕಟ್ಟೀಮನಿ ಪ್ರೌಢ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ನಗರದ 12 ಶಾಲೆಗಳ 34 ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಗುತ್ತಿದೆ ಎಂದು ಪ್ರತಿಷ್ಠಾನದ ದಾವಣಗೆರೆ ಘಟಕದ ಅಧ್ಯಕ್ಷ ಡಾ.ಸಿ.ಆರ್. ಬಾಣಾಪುರಮಠ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾನಿಗಳಿಂದ ಹತ್ತು ಸಾವಿರ ರೂ. ದೇಣಿಗೆ ಸಂಗ್ರಹಿಸಿ ಧಾರವಾಡದ ಕಚೇರಿಗೆ ಕಳುಹಿಸಿ, ಸಂಗ್ರಹಿತ ಮೊತ್ತದ ಮೇಲೆ ಪ್ರತಿ ವರ್ಷ ಬರುವ ಬಡ್ಡಿಯ ಹಣದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕ ರೂಪದಲ್ಲಿ ವಿತರಿಸಲಾಗುತ್ತದೆ ಎಂದು ಹೇಳಿದರು.

ಶಬ್ದಕೋಶ, ವ್ಯಾಕರಣ, ಬ್ರಬಂಧ, ಅಟ್ಲಾಸ್, ಜ್ಯಾಮಿಟ್ರಿ, ಕವಿ-ವಿಜ್ಞಾನಿಗಳ ಪರಿಚಯ, ಕ್ವಿಜ್, ಐತಿಹಾಸಿಕ, ಪೌರಾಣಿಕ, ಕಲೆ-ಸಾಹಿತ್ಯ, ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು, ಲೇಖನ ಸಾಮಗ್ರಿಗಳನ್ನು ವಿತರಿಸಲಾಗುತ್ತಿದೆ ಎಂದು ಹೇಳಿದರು.

ಈಗಾಗಲೇ ಪುಸ್ತಕ ವಿತರಣಾ ಕಾರ್ಯಕ್ರಮ ನಗರದ ಸೀತಮ್ಮ ಕಾಲೇಜಿನಿಂದ ಆರಂಭವಾಗಿದೆ ಎಂದ ಅವರು, ಇದು 13ನೇ ವರ್ಷದ ಕಾರ್ಯಕ್ರಮವಾಗಿದೆ ಎಂದರು.

ಶಿವಶಂಕರ ಹಿರೇಮಠ ಅವರು, ಪ್ರತಿಷ್ಠಾನದ ಆರಂಭದ ಬಗ್ಗೆ ವಿವರಿಸಿದರು. ಸಹ ಸಂಚಾಲಕ ವಿ.ಸಿ ಪುರಾಣಿಕ್ ಮಠ, ಸಂಚಾಲಕ ಪ್ರಕಾಶ್ ಬೂಸ್ನೂರು ಉಪಸ್ಥಿತರಿದ್ದರು.

## ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಅರ್ಜಿ

ದಾವಣಗೆರೆ, ಮಾ.10- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದೇ ದಿನಾಂಕ 14 ರವರೆಗೆ ಅವಧಿ ವಿಸ್ತರಿಸಿ ಅವಕಾಶ ಕಲ್ಪಿಸಲಾಗಿದೆ.

ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಿ ಅಂತಿಮ ದಿನಾಂಕ ಮುಕ್ತಾಯವಾದ ಕಾರಣ ಪ್ರವೇಶ ಪಡೆಯದ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ಮತ್ತು ವೃತ್ತಿಪರ ವಿದ್ಯಾರ್ಥಿಗಳಿಗೆ ತಡವಾಗಿ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿರುವುದರಿಂದ, ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಅವಕಾಶ ದೊರಕದ ಹೊಸ ವಿದ್ಯಾರ್ಥಿಗಳಿಗೆ, ಜಿಲ್ಲೆಗಳಲ್ಲಿ ಖಾಲಿ ಸ್ಥಾನಗಳು ಉಳಿಕೆಯಾಗಿರುವ ವಿದ್ಯಾರ್ಥಿನಿಲಯಗಳಿಗೆ ಮಾತ್ರ ಅನ್ವಯಿಸುವಂತೆ ಅರ್ಜಿ ಸಲ್ಲಿಸಲು ತಾಲ್ಲೂಕು ಕಲ್ಯಾಣ ಅಧಿಕಾರಿಗಳ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.


## ಆರ್ಯ ಈಡಿಗ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಮಾ. 10- ಜಿಲ್ಲಾ ಆರ್ಯ ಈಡಿಗ ಸಂಘ ಹಾಗೂ ಶ್ರೀ ರೇಣುಕಾಂಬ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಇವರುಗಳ ಸಂಯುಕ್ತಾಶ್ರಯದಲ್ಲಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ಆರ್ಯ ಈಡಿಗ ಸಮಾಜದ ದ್ವಿತೀಯ ಪಿಯುಸಿಯಲ್ಲಿ ಶೇ. 70 ಹಾಗೂ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿಗಳನ್ನು ಈಡಿಗ ಹಾಸ್ಟೆಲ್, ವಿನೋಬನಗರ, ದಾವಣಗೆರೆ ಇಲ್ಲಿಗೆ ನಾಳೆಯೊಳಗೆ ಸಲ್ಲಿಸಬಹುದಾಗಿದೆ ಎಂದು ಕಾರ್ಯದರ್ಶಿ ಎ. ನಾಗರಾಜ್ ತಿಳಿಸಿದ್ದಾರೆ.

## ವಿದ್ಯಾಸಿರಿಗೆ ಅರ್ಜಿ

ದಾವಣಗೆರೆ, ಮಾ.10- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್ ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಪಂಚಾಯ್ತಿಯಿಂದ ಸಂಸತ್‌ವರೆಗಿನ ಸದಸ್ಯರೆಲ್ಲರೂ ಪುಸ್ತಕ ಬರೆಯಲಿ



### 'ಅತ್ತಿ ಹೂವು' ಪುಸ್ತಕ ಬಿಡುಗಡೆಯಲ್ಲಿ ಶಾಸಕ ಹೆಚ್. ವಿಶ್ವನಾಥ್

ದಾವಣಗೆರೆ, ಮಾ.10- ಗ್ರಾಮ ಪಂಚಾಯ್ತಿಯಿಂದ ಹಿಡಿದು, ಸಂಸತ್‌ವರೆಗಿನ ಸದಸ್ಯರೆಲ್ಲರೂ ತಮ್ಮ ಕ್ಷೇತ್ರ ಮತ್ತು ಜೀವನದ ನೈಜತೆಯ ವಸ್ತು ಸ್ಥಿತಿ ಕುರಿತಾದ ಪುಸ್ತಕಗಳನ್ನು ಬರೆಯುವಂತಾಗಬೇಕು. ಅದಕ್ಕೆ ನನ್ನ ಶಾಸಕಾನುದಾನದಲ್ಲಿನ 2 ಕೋಟಿಯ ಹಣದಲ್ಲಿ 50 ಲಕ್ಷ ರೂ.ಗಳನ್ನು ಮೀಸಲಿಡುತ್ತೇನೆ ಎಂದು ವಿಧಾನ ಪರಿಷತ್ ಶಾಸಕ ಹೆಚ್. ವಿಶ್ವನಾಥ್ ಘೋಷಿಸಿದರು.

ನಗರದ ಕುವೆಂಪು ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಪ್ರೊ. ಓ. ನಾಗೇಂದ್ರಪ್ಪ ಅವರ ಸ್ನೇಹ ಬಳಗದ ಸಹಯೋಗದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಪ್ರೊ. ಓ. ನಾಗೇಂದ್ರಪ್ಪ ಅವರ 'ಅತ್ತಿ ಹೂವು' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಭಾರತದ ಜನತಂತ್ರ ವ್ಯವಸ್ಥೆಯ ಪ್ರಥಮ ಸರ್ಕಾರ ಗ್ರಾಮ ಪಂಚಾಯಿತಿ. ಅಲ್ಲಿ ಎಷ್ಟು ಸ್ವಾತಂತ್ರ್ಯ ಇದೆ, ಅಲ್ಲಿಗೆ ಕೆಲ ಶಾಸಕರೇ ಮಾಲೀಕರಂತೆ ಹೇಗೆ ವರ್ತಿಸುತ್ತಾರೆ. ಹೀಗೆ ಜನತಂತ್ರ ವ್ಯವಸ್ಥೆಯ ಬಗ್ಗೆಯೂ ಪುಸ್ತಕಗಳನ್ನು ಬರೆಯಬೇಕು, ಅವುಗಳು ಬಿಡುಗಡೆಗೊಂಡು ಜನ ಓದಿ ತಿಳಿಯುವಂತಾಗಬೇಕು ಎಂದು ತಿಳಿಸಿದರು.

ಓದು-ಬರಹ ಜೀವನದಲ್ಲಿ ಬಹಳ ಮುಖ್ಯವಾಗಿದ್ದು, ಇವುಗಳಿಲ್ಲದಿದ್ದರೆ ದೇಶವೂ ಅಲ್ಲ, ನಾಡೂ ಅಲ್ಲ. ದೇಶದಲ್ಲಿ 125 ಕೋಟಿ ಜನರಿದ್ದು, ಅವರುಗಳ ನೂರಾರು ಬದುಕು-ಬವಣೆಗಳಿವೆ, ಕಷ್ಟ-ನಲಿವುಗಳಿವೆ. ಅವುಗಳು ಬರವಣಿಗೆಯ ರೂಪದಲ್ಲಿ ದಾಖಲಾಗಬೇಕು. ಆಗ ಪರಿಸ್ಥಿತಿಯ ಚಿತ್ರಣ ಸಿಗುತ್ತದೆ. ಹಾಗಾಗಿ ನಮ್ಮ ಅನುಭವ ನಮ್ಮ ಸ್ವಂತ ಆಸ್ತಿಯಾಗಿದ್ದು, ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಬದುಕಿನ ವಸ್ತುಸ್ಥಿತಿ ಬರೆಯಬೇಕು ಎಂದು ತಿಳಿಸಿದರು.

ನಾನೂ ಸಹ ರಾಜ್ಯ, ದೇಶ, ಅಂತರರಾಷ್ಟ್ರೀಯ ರಾಜಕಾರಣದ ಕುರಿತಾಗಿ, 750 ವರ್ಷಗಳ ಹಿಂದಿನ ಲಂಡನ್ ಪಾರ್ಲಿಮೆಂಟ್ ಕುರಿತಾಗಿ ಒಟ್ಟು 7 ಪುಸ್ತಕಗಳನ್ನು ಬರೆದಿದ್ದೇನೆ. ಪ್ರೊ. ಓ. ನಾಗೇಂದ್ರಪ್ಪ ಅವರು ಬರೆದ ಪುಸ್ತಕದಲ್ಲಿ ತನ್ನ ನಿಜ ಜೀವನದ ಚಿತ್ರಣವನ್ನು ಬಿತ್ತರಿಸಿದ್ದಾರಲ್ಲದೇ, ಜೆ.ಹೆಚ್. ಪಟೇಲ್ ಅವರ ಜನನಾಯಕತ್ವದ ಬಗ್ಗೆಯೂ ತಿಳಿಸಿದ್ದಾರೆ. ಅಲ್ಲದೇ, ಪ್ರಸ್ತುತ ರಾಜಕಾರಣ, ರಾಜಕೀಯ ನಾಯಕತ್ವವು ಸಂಕುಚಿತ, ಸ್ವಜನ ಪಕ್ಷಪಾತದ ಬಗ್ಗೆ, ರಾಜಕಾರಣಿ ಹೇಗೆ ಸಮಯಕ್ಕೆ ತಕ್ಕಂತೆ ಮರಳುತ್ತಾರೆ ಎಂಬುದನ್ನೂ ಮಾರ್ಮಿಕವಾಗಿ ಬರೆದಿದ್ದಾರೆ ಎಂದು ಹೇಳಿದರು.

ಪ್ರಸ್ತುತ ವಿಶ್ವವಿದ್ಯಾನಿಲಯಗಳನ್ನು ಜಾತಿ ಸಂಕೋಲೆಯಲ್ಲಿ ಕಟ್ಟಿಹಾಕಲಾಗಿದೆ. ಅಕ್ಷರ ಸಂಸ್ಕೃತಿ ಹೋಗಿ ಧರ್ಮ-ಜಾತಿ ಸಂಸ್ಕೃತಿ ನೆಲೆಸುತ್ತಿದೆ ಎಂದು ವಿಷಾದಿಸಿದರು.

ಇದೇ ವೇಳೆ ಹೆಚ್. ವಿಶ್ವನಾಥ್ ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿನ ಗ್ರಂಥಾಲಯವನ್ನು ಡಿಜಿಟಲೀಕರಣ ಮುಖೇನ ಈ - ಗ್ರಂಥಾಲಯಕ್ಕೆ 5 ಲಕ್ಷ ರೂ. ದೇಣಿಗೆ ನೀಡುವುದಾಗಿ ಘೋಷಿಸಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಪ್ರೊ. ಚಂದ್ರಶೇಖರ ತಾಳ್ಯ, ಲೇಖಕ ಓ. ನಾಗೇಂದ್ರಪ್ಪ, ಪ್ರೊ. ಎ.ಬಿ. ರಾಮಚಂದ್ರಪ್ಪ, ಡಾ. ದಾದಾಪೀರ್ ನವಿಲೇಹಾಳ್ ವೇದಿಕೆ ಮೇಲಿದ್ದರು.

ಜಾನಪದ ತಜ್ಞ ಎಂ.ಜಿ. ಈಶ್ವರಪ್ಪ, ಹಿರಿಯ ಪತ್ರಕರ್ತ ಬಿ.ಎನ್ ಮಲ್ಲೇಶ್, ನಾ. ಲೋಕೇಶ್ ಒಡೆಯರ್, ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎ.ಆರ್. ಉಜ್ಜಿನಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ ಸ್ವಾಗತಿಸಿದರು. ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ನಿರೂಪಿಸಿದರು. ತಾಲ್ಲೂಕು ಗೌರವ ಕಾರ್ಯದರ್ಶಿ ದಾಗಿನಕಟ್ಟೆ ಪರಮೇಶ್ವರಪ್ಪ ವಂದಿಸಿದರು.

### ಜನತಂತ್ರ ವ್ಯವಸ್ಥೆಯ ಪ್ರಜೆ ಎಂದು ಈಗಲೂ ಹೇಳಲಾಗ್ತಿಲ್ಲ

ಪ್ರಸ್ತುತ ದೇಶದಲ್ಲಿ ರಾಜಕಾರಣ, ರಾಜಕೀಯವನ್ನು ಉಂಡು, ಉಸಿರಾಗಿ ಹೊದ್ದು ಮಲಗಿದ್ದರೂ ರಾಜಕೀಯ ಮೈಲಿಗೆಯಿಂದ ನೋಡುವಂತಾಗಿದೆ. ರಾಜಕಾರಣಿ ಅಸ್ಪೃಶ್ಯನಾಗುತ್ತಿದ್ದಾನೆ. ಇಂತಹ ನಕಾರಾತ್ಮಕಕ್ಕೆ ಜನಸಾಮಾನ್ಯರು ಮತ್ತು ಸರ್ಕಾರ ಕಾರಣವಾಗಿದೆ. ಎಲ್ಲಿಯತನಕ ರಾಜಕಾರಣಿ, ರಾಜಕೀಯದಲ್ಲಿ ಸಕಾರಾತ್ಮಕ ಭಾವನೆ ಜನತಂತ್ರ ವ್ಯವಸ್ಥೆಯಲ್ಲಿ ಮೂಡುವುದಿಲ್ಲವೋ ಅಲ್ಲಿಯ ತನಕ ದೇಶದ ಏಳಿಗೆ ಅಸಾಧ್ಯ. ನಕಾರಾತ್ಮಕ ಧೋರಣೆಯ ದೃಷ್ಟಿಕೋನದಿಂದ ಜನಪ್ರತಿನಿಧಿಯನ್ನು ನೋಡಿದಂತೆ ಜನತಂತ್ರ ವ್ಯವಸ್ಥೆಯೂ ಅಂತೆಯೇ ಕಾಣುತ್ತದೆ. ಕೆಲವು ಜನಪ್ರತಿನಿಧಿಗಳಿಗೆ ಯಾವ ಜಾತಿ, ಯಾವ ಪಕ್ಷದಲ್ಲಿದ್ದೇವೆ ಅನ್ನುವುದು ಅರಿವಿದೆ. ಆದರೆ, ಯಾವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂಬುವುದು ತಿಳಿದಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂದು ಹೇಳಲಾಗದಂತಹ ಸ್ಥಿತಿ ಇದೆ. ಸ್ವತಂತ್ರ ಭಾರತದ ಜನತಂತ್ರ ವ್ಯವಸ್ಥೆಯ ಪ್ರಜೆ ಎಂದು ಈಗಲೂ ಹೇಳಲಾಗುತ್ತಿಲ್ಲ. ಹಿಂದಿನಂತೆ ಜನಶಿಕ್ಷಣ ಇಲ್ಲವಾಗಿದೆ.

**- ಹೆಚ್. ವಿಶ್ವನಾಥ್,** ಮಾಜಿ ಸಚಿವರು

ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

### ಗ್ರಾಮ ಪಂಚಾಯತಿ ಕಾರ್ಯಾಲಯ, ಹೊಸಹಳ್ಳಿ.

ತಾಲ್ಲೂಕು: ಹೊನ್ನಾಳಿ ಜಿಲ್ಲಾ ಪಂಚಾಯತ್ : ದಾವಣಗೆರೆ

**ಕ್ರಮಾಂಕ : ಗ್ರಾಪಂ ಹೊ 15 ನೇ ಹಣಕಾಸು/ಸಿಆರ/2021-22** **ದಿನಾಂಕ : 10.03.2022**

### ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ 2021-22ನೇ ಸಾಲಿಗೆ 15ನೇ ಹಣಕಾಸು ಯೋಜನೆಯ ಕ್ರಿಯಾ ಯೋಜನೆಯಂತೆ ಎಲ್ಲಾ ಗ್ರಾಮದ ಕುಡಿಯುವ ನೀರಿನ ಮೋಟಾರ್ ದುರಸ್ತಿ ನಿರ್ವಹಣೆಗಾಗಿ ಮೋಟರ್, ಪೈಪ್‌ಗಳು ಹಾಗೂ ಸಂಬಂಧಪಟ್ಟ ಬಿಡಿ ಭಾಗಗಳ ಮತ್ತು ಕೈ ಪಂಪ್ ಬಿಡಿ ಭಾಗಗಳ ಖರೀದಿಗಾಗಿ ಮತ್ತು ಬೀದಿ ದೀಪಗಳ ಮತ್ತು ಕರೋನಾ ನಿಯಂತ್ರಣಕ್ಕೆ ಕ್ರಮವಹಿಸಲು ಪರಿಕರಗಳು, ಸ್ವಚ್ಛತೆ ಹಾಗೂ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಪರಿಕರಗಳ, ಸಾಮಗ್ರಿಗಳ ಖರೀದಿ ವಿತರಣೆ ವಾರ್ಷಿಕ ನಿರ್ವಹಣೆಯ ಅನುಷ್ಠಾನಕ್ಕಾಗಿ ನೊಂದಾಯಿತ ಅರ್ಹ ಎಲೆಕ್ಟ್ರಿಕಲ್ಸ್ ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಈ ಕೆಳಗಿನಂತೆ ಕಾಮಗಾರಿಗಳ (KW-1) ನಿಯಮಾವಳಿಗಳಂತೆ ಟೆಂಡರ್ ಕರೆಯಲಾಗಿದ್ದು, ಸರಬರಾಜುದಾರರು ಗ್ರಾಮ ಪಂಚಾಯತಿ ಕಛೇರಿಯಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಅರ್ಜಿ ಪಡೆದು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಹೊಸಹಳ್ಳಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಸಂಪರ್ಕಿಸಬಹುದು.

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|
| 01) | ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದ ಕುಡಿಯುವ ನೀರಿನ ನಿರ್ವಹಣೆಗಾಗಿ ಬಿಡಿಭಾಗಗಳ ಖರೀದಿ. | 192000-00 | |
| 02) | ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದ ಎಸ್.ಸಿ./ ಎಸ್.ಟಿ. ಕಾಲೋನಿಗಳಲ್ಲಿ ಎಲ್‌ಇಡಿ ಬೀದಿ ದೀಪಗಳ ಬಿಡಿಭಾಗಗಳು ಖರೀದಿ ಮತ್ತು ಸರಬರಾಜು. | 250000-00 | |
| 03) | ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದ ಎಸ್.ಸಿ./ ಎಸ್.ಟಿ. ಕಾಲೋನಿಗಳಲ್ಲಿ ಕುಡಿಯುವ ನೀರಿನ ನಿರ್ವಹಣೆಗಾಗಿ ಬಿಡಿಭಾಗಗಳ ಖರೀದಿ. | 126000-00 | |
| 04) | ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದ ಎಸ್.ಸಿ./ ಎಸ್.ಟಿ. ಕಾಲೋನಿಗಳಲ್ಲಿ ಕುಡಿಯುವ ನೀರಿನ ನಿರ್ವಹಣೆಗಾಗಿ ಬಿಡಿಭಾಗಗಳ ಖರೀದಿ. | 150000-00 | |
| 05) | ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದ ಎಲ್‌ಇಡಿ ಬೀದಿ ದೀಪಗಳ ಬಿಡಿಭಾಗಗಳು ಖರೀದಿ ಮತ್ತು ಸರಬರಾಜು. | 175000-00 | |
| 06) | ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮನೆ ಮನೆಗಳಿಂದ ವಿಂಗಡಿಸಿದ ತ್ಯಾಜ್ಯ ಸಂಗ್ರಹಣೆ ಮಾಡಲು ಪ್ಲಾಸ್ಟಿಕ್ ಬಕೆಟ್‌ಗಳು, ಟ್ರೈ ಸೈಕಲ್ ಮತ್ತು ಪುಶ್‌ಕಾಟ್‌ಗಳ ಖರೀದಿ. | 230413-00 | |

1) ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ : 21.03.2022 ಸಾಯಂಕಾಲ 4.30 ರವರೆಗೆ ಅರ್ಜಿ ಶುಲ್ಕ 100/- ಹಣವನ್ನು ನೀಡಿ ಖಾಲಿ ಟೆಂಡರ್ ಫಾರಂಗಳನ್ನು ಪಡೆಯತಕ್ಕದ್ದು.
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 22.03.2022 ಸಾಯಂಕಾಲ 1.30 ರವರೆಗೆ.
3) ಟೆಂಡರ್ ತೆರೆಯುವ ಕೊನೆಯ ದಿನಾಂಕ : 23.03.2022 ಪೂರ್ವಾಹ್ನ 11.30 ರವರೆಗೆ / ಸಾಧ್ಯವಾದಲ್ಲಿ ಅಂದೇ ಅಥವಾ ಮುಂದೆ ತಿಳಿಸಲು ದಿನಾಂಕದಂದು ಟೆಂಡರ್ ತೆರೆಯಲಾಗುವುದು.
4) ಇ.ಎಂ.ಡಿ. ಮೊತ್ತ ಶೇ. 2.5

ಸಹಿ/- ಅಧ್ಯಕ್ಷರು
ಗ್ರಾಮ ಪಂಚಾಯ್ತಿ, ಹೊಸಹಳ್ಳಿ.

ಸಹಿ/-
ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಹೊಸಹಳ್ಳಿ.

# 4 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಮಲೇಬೆನ್ನೂರಿನಲ್ಲಿ ವಿಜಯೋತ್ಸವ



ಮಲೇಬೆನ್ನೂರು, ಮಾ.10- ಉತ್ತರಪ್ರದೇಶ, ಉತ್ತರ ಖಂಡ, ಮಣಿಪುರ ಮತ್ತು ಗೋವಾ ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಪಟ್ಟಣದ ಮುಖ್ಯ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಈ ವೇಳೆ ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಪಂಚ ರಾಜ್ಯಗಳಲ್ಲಿ ಬಿಜೆಪಿಗೆ ಗೆಲುವು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತವನ್ನು ದೇಶದ ಜನ ಒಪ್ಪಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದ್ದು, ಕರ್ನಾಟಕದಲ್ಲೂ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು.

ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ ಮಾತನಾಡಿದರು.

ತಾ. ಗ್ರಾ. ಬಿಜೆಪಿ ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಗೌಡ್ರ ಮಂಜಣ್ಣ, ಮಾಜಿ ಸದಸ್ಯ ಭಾನುವಳ್ಳಿ ಸುರೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಜಿ.ಎಂ. ಮಹೇಶ್ವರಗೌಡ, ಬಿಜೆಪಿ ಮುಖಂಡರಾದ ಕೆ.ಜಿ. ವೀರನಗೌಡ, ಜಿಗಳೇರ ಹಾಲೇಶಪ್ಪ, ಭಾನುವಳ್ಳಿಯ ಎ.ಕೆ. ಮಂಜಪ್ಪ, ಬೆಣ್ಣೆಹಳ್ಳಿ ಬಸವರಾಜ್, ದೊರೆ, ಆನಂದಚಾರ್, ನಿಟ್ಟೂರು ಧನಂಜಯ, ಸಂಗಮೇಶ್, ನ್ಯಾಯಬೆಲೆ ಅಂಗಡಿ ಮಂಜಣ್ಣ, ಪಾಳೇಗಾರ್ ನಾಗರಾಜ್, ಜಿ.ಪಿ. ಹನುಮಗೌಡ, ಕೋಮಾರನಹಳ್ಳಿಯ ಐರಣಿ ಮಹೇಶ್ವರಪ್ಪ, ಜಿ. ಸುನೀಲ್, ಓ.ಜಿ. ಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಹರಿಹರದಲ್ಲಿ ಬಿಜೆಪಿ ವಿಜಯೋತ್ಸವ



ಹರಿಹರ, ಮಾ.10- ಪಂಚ ರಾಜ್ಯ ಚುನಾವಣೆಯಲ್ಲಿ ಬಿಜೆಪಿ ನಾಲ್ಕು ರಾಜ್ಯಗಳಲ್ಲಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ನಗರ ಘಟಕದ ವತಿಯಿಂದ ರಾಣಿ ಚೆನ್ನಮ್ಮ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರೇಶ್ ಹನಗವಾಡಿ, ನಗರ ಘಟಕ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ಹೆಚ್. ಮಂಜನಾಯ್ಕ, ಮಹಿಳಾ ಮೋರ್ಚಾ ಅಧ್ಯಕ್ಷರಾದ ಅಶ್ವಿನಿ ಕೃಷ್ಣ, ಜಿಲ್ಲಾ ಕಾರ್ಯದರ್ಶಿ ರೂಪ ಕಾಟ್ವೆ, ಮುಖಂಡರಾದ ತುಳಜಪ್ಪ ಭೂತೆ, ಮಂಜಣ್ಣ ನಲ್ಲಿ, ರಾಜು ಆಟೋ, ಸುರೇಶ್ ತೆರದಾಳ್, ಹೆಚ್. ಎಸ್. ರಾಘವೇಂದ್ರ, ಮಾಲತೇಶ್ ಭಂಡಾರಿ, ಶಾಂತರಾಜ್, ಸುನೀಲ್ ಕುಮಾರ್, ಗಿರೀಶ್, ಅದ್ವೈತ ಶಾಸ್ತ್ರಿ, ಚಂದ್ರಕಾಂತ್, ಪ್ರವೀಣ್ ಪವಾರ್, ಸಾಕ್ಷಿ ಸಿಂದೆ ಮತ್ತಿತರರು ಉಪಸ್ಥಿತರಿದ್ದರು.

# ಶ್ರೀ ಮುರುಡ ಬಸವೇಶ್ವರ ರಥೋತ್ಸವ



**ಹಳ್ಳಿಹಾಳ್**

ಮಲೇಬೆನ್ನೂರು, ಮಾ. 10- ಹಳ್ಳಿಹಾಳ್ ಗ್ರಾಮದ ಆರಾಧ್ಯ ದೈವ ಶ್ರೀ ಮುರುಡ ಬಸವೇಶ್ವರ ದೇವರ ರಥೋತ್ಸವ ಗುರುವಾರ ಸಂಜೆ ಸಂಭ್ರಮದಿಂದ ಜರುಗಿತು, ವಿವಿಧ ಕಲಾ ಮೇಳಗಳು ರಥೋತ್ಸವಕ್ಕೆ ಮೆರಗು ತಂದವು. ಹಳ್ಳಿಹಾಳ್ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ ಜನ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು, ಶುಕ್ರವಾರ ಸಂಜೆ ಓಕುಳಿ ನಡೆಯಲಿದೆ,

# ಪುಟ್ಟಮ್ಮನ ದಾನ ಬೆಟ್ಟದಂತದ್ದು



***ದಿಟ್ಟ, ಸಾತ್ವಿಕ ಮಹಿಳೆ, ಕೀರ್ತಿಶೇಷ ಶ್ರೀಮತಿ ಪುಟ್ಟಮ್ಮ ಮಹಾರುದ್ರಯ್ಯನವರ ದೇಹದಾನದ ವಿಷಯವನ್ನು ಸಂಕೇತವಾಗಿಟ್ಟುಕೊಂಡು ದೇಹದಾನದ ಕುರಿತಾಗಿ ಅನೇಕರಲ್ಲಿರುವ ಭಯ ನಿವಾರಣೆ ಪ್ರಯತ್ನವೇ ಈ ಲೇಖನ.***

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಿಂದಿನ ಮತ್ತು ಮುಂದಿನ ದಿನ ನಮ್ಮ ನಗರದಲ್ಲಿ ದಿಟ್ಟ, ಸಾತ್ವಿಕ ಮಹಿಳೆಯೋರ್ವರ ಜೀವಾಂತ್ಯ ಹಾಗೂ ದೇಹದಾನ ನೆರವೇರಿದವು. ಇದೇ 'ಪುಟ್ಟಮ್ಮನ ಬೆಟ್ಟದಂತಾ ದಾನ', ವೈದ್ಯಕೀಯ ವ್ಯಾಸಂಗದವರಿಗಾಗಿ ದೇಹವನ್ನೇ ಸಮರ್ಪಿಸಿದ ಘಟನೆ.

**ದೇಹದಾನದ ಮಹತ್ವ :** ನೇತ್ರದಾನ, ರಕ್ತದಾನ, ಅಂಗಾಂಗ ದಾನಗಳೂ ಶ್ರೇಷ್ಠ ದಾನಗಳು. ಒಬ್ಬರ ನೇತ್ರದಾನದಿಂದ ಇಬ್ಬರಿಗೆ ದೃಷ್ಟಿ ಬರುತ್ತದೆ. ಒಬ್ಬರ ರಕ್ತದಾನದಿಂದ ನಾಲ್ಕು ಜನರ ಜೀವ ಉಳಿಯುತ್ತದೆ. ಒಬ್ಬರ ಅಂಗಾಂಗಗಳ ದಾನದಿಂದ ಅವುಗಳನ್ನು ಕಸಿ ಮಾಡಿಸಿಕೊಂಡ ಕೆಲವು ಜನರ ಜೀವ ಉಳಿಯುತ್ತದೆ. ಆದರೆ, ಒಬ್ಬರ ದೇಹದಾನದಿಂದ ಆ ದೇಹವನ್ನು ಪ್ರಾಯೋಕವಾಗಿಸಿಕೊಂಡು ವೈದ್ಯಕೀಯ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಮುಂದೆ ವೈದ್ಯರಾಗಿ, ಶಸ್ತ್ರ ಚಿಕಿತ್ಸಕರಾಗಿ ಸಾವಿರ ಸಾವಿರ ರೋಗಿಗಳ ಜೀವ ಉಳಿಸಲು ಕಾರಣವಾಗುತ್ತದೆ. ಹಾಗಾಗಿ ದೇಹದಾನ ಸಾಮಾನ್ಯವಲ್ಲ, ಬೆಟ್ಟದಂತಾದ್ದು.

**ಭಯ ಬೇಡ :** ಮೃತ ದೇಹಕ್ಕೆ ವಿಧಿವತ್ತಾದ ಅಂತ್ಯಸಂಸ್ಕಾರವಿಲ್ಲದೇ ಸದ್ಗತಿಯಾಗಲೀ, ಮೋಕ್ಷವಾಗಲೀ ಇಲ್ಲ, ಅಲ್ಲದೇ ಅಂತ್ಯ ಸಂಸ್ಕಾರ ಪೂರ್ವದಲ್ಲಿ ದೇಹ ಅಖಂಡವಾಗಿರಬೇಕು, ಕತ್ತರಿಸಲಾಗದು ಎಂಬ ನಂಬಿಕೆಯೇ ಅನೇಕರ ದೇಹದಾನ ನಿರ್ಧಾರಕ್ಕೆ ಅಡ್ಡಿಯಾಗಿದೆ. ಮೃತ ದೇಹವನ್ನು ಅಗ್ನಿಗಿಟ್ಟಾಗಲೂ ಕರ್ಪೂರದಂತೆ ಭಗ್ ಎಂದು ಒಮ್ಮೇಲೆ ಸುಟ್ಟು ಭಸ್ಮವಾಗುವುದಿಲ್ಲ, ಬೆಂದು ಕರಕಲಾಗುತ್ತಾ ಹೋದಂತೆ ಕೈ ಕಾಲು ಇತ್ಯಾದಿ ಅಂಗಾಂಗಗಳು ಕಳಚಿ ಚಿತೆಯಲ್ಲಿ ಬೀಳುವುದು ಸ್ವಾಭಾವಿಕ. ಮೃತದೇಹವನ್ನು ಮಣ್ಣು ಮಾಡಿದಾಗಲೂ ದೇಹ ಒಮ್ಮೆಗೇ ಮಣ್ಣಿನಲ್ಲಿ ಮಣ್ಣಾಗುವುದಿಲ್ಲ. ನಿಧಾನವಾಗಿ ದೇಹ ಬೇಯುತ್ತಾ, ಕೊಳೆಯುತ್ತಾ, ಮಾಂಸ ಮಜ್ಜೆಗಳು ಉದುರುತ್ತಾ ಮಣ್ಣಾಗುತ್ತವೆ, ಅಖಂಡವಾಗಿಯೇ ವಿಲೇವಾರಿಯಾಗುವುದೇ ಇಲ್ಲ.

ದೇಹದಾನ ನಂತರ ವೈದ್ಯಕೀಯ ಅಧ್ಯಯನಕ್ಕಾಗಿ ಕತ್ತರಿಸಿ, ಅಭ್ಯಸಿಸುತ್ತಾರಾದರೂ ಹಾಗೆ ಕತ್ತರಿಸಿದ ದೇಹ ಭಾಗಗಳ 'ಟಿಶ್ಯೂ' ಮುಂತಾದ ಮೃದು ಅಂಶಗಳನ್ನು ವ್ಯವಸ್ಥಿತವಾಗಿ ಸುಡಲಾಗುತ್ತದೆ ಮತ್ತು ಗಟ್ಟಿ ಭಾಗಗಳನ್ನು ಮಣ್ಣಿನಲ್ಲಿ ವ್ಯವಸ್ಥಿತವಾಗಿ ಹೂಳಲಾಗುತ್ತದೆ, ಎಲ್ಲೋ ತಿಪ್ಪೆಗೆ ಎಸೆಯುವುದಿಲ್ಲ. 'ಅಗ್ನಿಗತ ಮತ್ತು ಭೂಗತ' ಎರಡೂ ವಿಧಿಗಳೂ ನೆರವೇರುತ್ತವೆ. ಭಯ, ಆತಂಕ ಬೇಡ.

ದೇಹವನ್ನು 'ಡಿಸೆಕ್ಷನ್'ಗಾಗಿ ವಿದ್ಯಾರ್ಥಿಗಳಿಗೆ ಕೊಡುವ ಮೊದಲು ಈ ಮೃತದೇಹವೇ ನಿಜವಾಗಿಯೂ ನಿಮ್ಮ 'ಪರಮಗುರು', ಇದಕ್ಕೆ ಗೌರವ ಸಮರ್ಪಿಸಿ, ಮುಂದುವರೆಯಿರಿ ಎಂದು ಅಧ್ಯಾಪಕರು ಹೇಳುತ್ತಾರೆ. 'ಮೃತದೇಹ ವ್ಯರ್ಥವಾಗುವುದಿಲ್ಲ, ಗುರುವಾಗುತ್ತದೆ.'

**ಪುರಾಣದಲ್ಲಿ ಸಮರ್ಥನೆ :** ಮೃತ ದೇಹವು ಭಿನ್ನವಾದಾಗ (ಕತ್ತರಿಸಲ್ಪಟ್ಟಾಗ) ಪ್ರತಿಭಾಗವೂ ಅಂದರೆ ಒಂದೊಂದು ತುಂಡೂ ಒಂದೊಂದು ಶಕ್ತಿಯಾದ ಕಥೆ ನಮ್ಮ ಪ್ರಾಚೀನ ಪುರಾಣಗಳಲ್ಲಿದೆ. ಬಹುಷಃ ಜಗತ್ತಿನ ಬೇರೆ ಯಾವುದೇ ದೇಶಗಳ ಆಧ್ಯಾತ್ಮಿಕ ಸಾಹಿತ್ಯಗಳಲ್ಲೂ ಇಂತಹ ಮೌಲ್ಯಯುತ ನಿದರ್ಶನಗಳು ಸಿಗುವುದಿಲ್ಲ.

ತಂದೆ ದಕ್ಷ ಪ್ರಜಾಪತಿಯ ಯಜ್ಞದಲ್ಲಿ ಗಂಡ ಪರಶಿವನ ಅವಮಾನವನ್ನು ಸಹಿಸದೇ ಸತಿ ದಾಕ್ಷಾಯಣಿಯು ಅಗ್ನಿಕುಂಡಕ್ಕೆ ಹಾರಿ ಆತ್ಮಾಹುತಿ ಮಾಡಿಕೊಂಡಾಗ ವ್ಯಗ್ರನಾದ ಪರಶಿವನು, ಸತಿಯ ಮೃತ ದೇಹವನ್ನು ಹೊತ್ತು ರುದ್ರಾತಾಂಡವ ಮಾಡುತ್ತಿದ್ದರೆ, ಲೋಕ ಪ್ರಳಯದ ಭೀತಿ ಎದುರಾಗುತ್ತದೆ. ದಾಕ್ಷಾಯಣಿಯ ಮೃತ ದೇಹದ ವಿಲೇವಾರಿಯಾಗದೇ ಪರಶಿವನ ಕೋಪ ಶಮನವಾಗುವುದಿಲ್ಲವೆಂದು ವಿಷ್ಣುವು ತನ್ನ ಸುದರ್ಶನ ಚಕ್ರದಿಂದ ದಾಕ್ಷಾಯಣಿಯ ದೇಹವನ್ನು ಭಾಗಿಸಿ ಅಂದರೆ ತುಂಡರಿಸಿ, ಭೂಖಂಡಕ್ಕೆ ಚೆಲ್ಲಿದಾಗ, ಎಲ್ಲೆಲ್ಲಿ ಆ ದೇಹ ಭಾಗಗಳು ಬಿದ್ದುವೋ ಅಲ್ಲೆಲ್ಲಾ ಶಕ್ತಿಪೀಠಗಳು ಆದವೆಂದು ಹೇಳಲಾಗಿದೆ.

ಮತ್ಸ್ಯ ಪುರಾಣ, ಮಹಾಭಾರತ ಮುಂತಾದವುಗಳ ಪ್ರಕಾರ 108 ತುಂಡುಗಳಾಗಿ ಬಿದ್ದ ಸ್ಥಳಗಳಲ್ಲಿ 108 ಶಕ್ತಿ ಪೀಠಗಳಾದವೆಂದು ಹೇಳಿದ್ದರೆ, ಕಾಳಿಕಾ ಪುರಾಣ, ರುದ್ರಯಾಮಾಲ ಮುಂತಾದವುಗಳ ಪ್ರಕಾರ 51 ತುಂಡಾಗಳಾಗಿ ಬಿದ್ದ ಸ್ಥಳಗಳಲ್ಲಿ 51 ಶಕ್ತಿ ಪೀಠಗಳು ಆದವೆಂದು ಹೇಳಲಾಗಿದೆ. ಆದಿಗುರು ಶಂಕರಾಚಾರ್ಯರ ಅಷ್ಟಾದಶ ಶಕ್ತಿ ಪೀಠಸ್ತೋತ್ರದ ಪ್ರಕಾರ 18 ತುಂಡುಗಳು ಬಿದ್ದ 18 ಶಕ್ತಿ ಪೀಠಗಳ ಉಲ್ಲೇಖವಿದೆ.

***ಲಂಕಾಯಾಂ ಶಾಂಕರೀದೇವಿ, ಕಾಮಾಕ್ಷೀ ಕಾಂಚಿಕಾಪುರೇ,***
***ಪ್ರದ್ಯುಮ್ನೇ ಶೃಂಖಲಾದೇವೀ, ಚಾಮುಂಡೀ ಕ್ರೌಂಚಪಟ್ಟಣೆ,***
***ಅಲಂಪುರೇ ಜೋಗುಲಾಂಬಾ, ಶ್ರೀಶೈಲೇ ಭ್ರಮರಾಂಬಿಕಾ,***
***ಕೊಲ್ಲಾಪುರೇ ಮಹಾಲಕ್ಷ್ಮೀ, ಮಾಹೂರ್ಯೆ ಏಕವೀರಿಕಾ,***
***ಉಜ್ಜಯಿನ್ಯಾಂ ಮಹಾಕಾಲೀ, ಪೀಠಕ್ಯಾಂ ಪುರುಹೂತಿಕಾ,***
***ಓಢ್ಯಾಯಂ ಗಿರಿಜಾದೇವೀ, ಮಾಣಿಕ್ಯಾಂ ದಕ್ಷ ವಾಟಿಕೇ,***
***ಹರಿ ಕ್ಷೇತ್ರೇ ಕಾಮರೂಪಾ, ಪ್ರಯಾಗೇ ಮಾಧವೇಶ್ವರಿ,***
***ಜ್ವಾಲಾಯಂ ವೈಷ್ಣವಿದೇವಿ, ಗಯಾಮಾಂಗಲ್ಯ ಗೌರಿಕಾ,***
***ವಾರಣಸ್ಯಾಂ ವಿಶಾಲಾಕ್ಷೀ, ಕಾಶ್ಮೀರೇಷು ಸರಸ್ವತಿ॥***

ದಾಕ್ಷಾಯಣಿ-ಸತೀದೇವಿಯ ಮೃತದೇಹದ ತೊಡೆಯ ಭಾಗ ಬಿದ್ದ ಶ್ರೀಲಂಕಾದಲ್ಲಿ ಶಾಂಕರೀದೇವಿ, ಹೊಕ್ಕಳ ಭಾಗ ಕಾಂಚಿಯಲ್ಲಿ ಕಾಮಾಕ್ಷಿ, ಹೊಟ್ಟೆ ಭಾಗ ಬಿದ್ದಲ್ಲಿ ಶೃಂಖಲಾದೇವಿ, ಹಲ್ಲು ಬಿದ್ದ ಸ್ಥಳದಲ್ಲಿ ಜೋಗುಲಾಂಬಾ, ಕತ್ತಿನ ಭಾಗ ಬಿದ್ದ ಶ್ರೀಶೈಲದಲ್ಲಿ ಭ್ರಮರಾಂಬಿಕಾ, ಎಡಗಣ್ಣು ಬಿದ್ದ ಕೊಲ್ಲಾಪುರದಲ್ಲಿ ಮಹಾಲಕ್ಷ್ಮೀ, ಬಲಗೈ ಬಿದ್ದ ಸ್ಥಳದಲ್ಲಿ ಏಕನೀರಿಕಾ, ನಾಲಿಗೆ ಬಿದ್ದ ಸ್ಥಳ ಉಜ್ಜಯಿನಿಯಲ್ಲಿ ಮಹಾಕಾಳೀ, ಪೀಠದ ಭಾಗ ಬಿದ್ದ ಸ್ಥಳದಲ್ಲಿ ಪುರುಹೂತಿಕಾ, ನಾಭಿ ಬಿದ್ದ ಸ್ಥಳ ಒರಿಸ್ಸಾದಲ್ಲಿ ಗಿರಿಜಾದೇವಿ, ಕೂದಲು ಬಿದ್ದ ಜಾಗ ಕ್ರೌಂಚಪಟ್ಟಣಾ ಅಂದರೆ ಮೈಸೂರಲ್ಲಿ ಚಾಮುಂಡೇಶ್ವರಿ, ಕೆನ್ನೆಭಾಗ ಬಿದ್ದ ಸ್ಥಳದಲ್ಲಿ ದಕ್ಷವಾಟಿಕಾ ದೇವಿ, ಯೋನಿ ಬಿದ್ದ ಸ್ಥಳ ಅಸ್ಸಾಂನಲ್ಲಿ ಕಾಮರೂಪಾದೇವಿ, ತಲೆ ಭಾಗ ಬಿದ್ದ ಸ್ಥಳದಲ್ಲಿ ವೈಷ್ಣವೀದೇವಿ, ಬೆರಳುಗಳು ಬಿದ್ದ ಸ್ಥಳ ಪ್ರಯಾಗದಲ್ಲಿ ಮಾಧವೇಶ್ವರಿ, ಎದೆ ಭಾಗ ಬಿದ್ದ ಸ್ಥಳ ಗಯಾದಲ್ಲಿ ಮಾಂಗಲ್ಯ ಗೌರೀ, ಗಂಟಲ ಭಾಗ ಬಿದ್ದ ಸ್ಥಳ ವಾರಣಾಸಿಯಲ್ಲಿ ವಿಶಾಲಾಕ್ಷಿ, ಬಲಗೈ ಭಾಗ ಬಿದ್ದ ಸ್ಥಳದಲ್ಲಿ ಸರಸ್ವತಿ - ಶಾರದಾ ಪೀಠ'' ಹೀಗೆ ದಾಕ್ಷಾಯಣಿಯ ದೇಹದ ತುಂಡಾದ ಜಾಗಗಳೆಲ್ಲಾ ಶಕ್ತಿ ಪೀಠಗಳಾದಂತೆ ದೇಹದಾನ ಮಾಡಿದ ಶರೀರದ ಭಾಗ, ಭಾಗಗಳನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳೂ ಮುಂದೆ ವೈದ್ಯಕೀಯ ಶಕ್ತಿಗಳಂತೆ ಡಾಕ್ಟರುಗಳಾಗಿ ಸಾವಿರಾರು ಜನರ ಪ್ರಾಣ ಉಳಿಸುತ್ತಾರೆ. ಹೀಗಾಗಿ ದೇಹದಾನದ ಬಗೆಗಾಗಲೀ, ದೇಹವನ್ನು ಕತ್ತರಿಸುತ್ತಾರೆ ಎಂಬ ಬಗೆಗಾಗಲೀ ಭಯ, ಆತಂಕ ಬೇಡ.

**ಮಹಾದಾನ :** ಪುಟ್ಟಮ್ಮನವರಷ್ಟೇ ಅಲ್ಲ ಇವರ ಯಜಮಾನರಾದ ಮಹಾರುದ್ರಯ್ಯನವರ, ಇವರ ಪುತ್ರನ ಹೀಗೆ ಕುಟುಂಬದ ಮೂವರೂ ದೇಹದಾನ ಮಾಡಿದ್ದು ಸೊಸೆಯೂ ದೇಹದಾನಕ್ಕೆ ನೋಂದಣಿ ಮಾಡಿಸಿರುವುದು ಬಹುಷಃ ದಾವಣಗೆರೆ ನಗರ, ಕರ್ನಾಟಕ ರಾಜ್ಯ, ಭಾರತ ದೇಶದಲ್ಲಷ್ಟೇ ಅಲ್ಲ, ವಿಶ್ವದಲ್ಲೇ ಅಪರೂಪ. ಹೀಗೆ ಇಡೀ ಕುಟುಂಬವೇ ದೇಹದಾನ ಮಾಡುವುದು. ಇಂತಹ ನಿದರ್ಶನಗಳು ಪತ್ರಿಕೆಗಳಲ್ಲಿ, ಟಿ.ವಿ. ಚಾನೆಲ್‌ಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ವಿಶೇಷವಾಗಿ ಹೈಲೈಟ್ ಆಗಬೇಕಿತ್ತು. ಇಂತವರ ಮನೆಗಳಿಗೆ ಜನಪ್ರತಿನಿಧಿಗಳು, ಅಧಿಕಾರಿಗಳು ಬಂದು ಗೌರವ ಸಮರ್ಪಿಸಬೇಕು. ಆ ಮೂಲಕ ಇತರರಿಗೆ ದೇಹದಾನಕ್ಕೆ ಪ್ರೇರಣೆಯಾಗಬೇಕು.

**- ಎಚ್.ಬಿ. ಮಂಜುನಾಥ,**
ಹಿರಿಯ ಪತ್ರಕರ್ತ.

# ಹೊನ್ನಾಳಿ : ದೇಹದಾನ ಶ್ಲಾಘನೀಯ

ಹೊನ್ನಾಳಿ, ಮಾ.10- ಇತ್ತೀಚೆಗೆ ನಿಧನರಾದ ಬೆಸ್ಕಾಂ ನಿವೃತ್ತ ಇಂಜಿನಿಯರ್, ದೇಹದಾನಿ 82 ವರ್ಷದ ಎಲ್.ಎಸ್. ವೈಶ್ಯರ್ ಅವರ ದೇಹವನ್ನು ವಿಜ್ಞಾನದ ವಿದ್ಯಾರ್ಥಿಗಳ ಅಧ್ಯಯನಕ್ಕೆ ದಾವಣಗೆರೆ ಜೆಜೆಎಂ ಆಸ್ಪತ್ರೆಗೆ ನೀಡಿರುವುದನ್ನು ಸಿರಿಗನ್ನಡ ವೇದಿಕೆಯ ಅಧ್ಯಕ್ಷ ಯು.ಎನ್. ಸಂಗನಾಳಮಠ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವೈಶ್ಯರ್ ಅವರು ತಮ್ಮ 60 ನೇ ವಯಸ್ಸಿನಲ್ಲಿಯೇ ದೇಹದಾನದ ಪ್ರಮಾಣ ಮಾಡಿದ್ದರು. ಸಂತಾಪ ಸಭೆ ನಡೆಸಿ, ಮೃತರು ಕಾಯಕ ಯೋಗಿ, ಪರಿಸರ ಪ್ರೇಮಿ ಆಗಿದ್ದರು, ಅವರ ಕಾರ್ಯ ಇತರರಿಗೆ ಪ್ರೇರಣೆಯಾಗಿದೆ ಎಂದು ಸ್ಮರಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮುರಿಗೆಪ್ಪ ಗೌಡ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ದೇವೇಂದ್ರಯ್ಯ, ಶೇಖರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಸಂಭ್ರಮದಿಂದ ಜರುಗಿದ ವ.ಬಸವಾಪುರ ರಥೋತ್ಸವ



ಮಲೇಬೆನ್ನೂರು, ಮಾ.10- ವಡೆಯರ ಬಸವಾಪುರ ಗ್ರಾಮದ ಶ್ರೀ ಬಸವೇಶ್ವರ ದೇವರ ರಥೋತ್ಸವ ಗುರುವಾರ ಬೆಳಗ್ಗೆ ಸಂಭ್ರಮದಿಂದ ಗ್ರಾಮಸ್ಥರ ಸಮ್ಮುಖದಲ್ಲಿ ಜರುಗಿತು.

ಅತಿ ಚಿಕ್ಕ ಗ್ರಾಮವಾದ ಈ ಊರಿನ ತೇರಿಗೆ ಹೊರಗಿನ ಭಕ್ತರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ಗ್ರಾಮಸ್ಥರೇ ಹಾಜರಿದ್ದು, ರಥೋತ್ಸವ ನಡೆಸುತ್ತಾರೆ. ಈ ಬಾರಿ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಗ್ರಾಮಸ್ಥರ ಕೋರಿಕೆ ಮೇರೆಗೆ ರಥೋತ್ಸವದಲ್ಲಿ ಭಾಗವಹಿಸಿದ್ದರು.

ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್, ಗ್ರಾಮದ ಎಂ. ಕರಿಬಸಯ್ಯ, ಹೆಚ್.ಮಹಾಂತಯ್ಯ, ಆನಂದಯ್ಯ, ವೀರಭದ್ರಯ್ಯ, ಕರಿಬಸಯ್ಯ, ಮಲ್ಲಯ್ಯ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು. ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಕೂಡ ತೇರಿನಲ್ಲಿ ಭಾಗಿಯಾಗಿದ್ದರು. ಸಂಜೆ ಓಕುಳಿ ನಂತರ ಭದ್ರಾವತಿಯ ತೃಪ್ತಿ ಮೆಲೋಡಿಯಸ್ ಆರ್ಕೆಸ್ಟ್ರಾ ಇವರಿಂದ ನಡೆದ ರಸಮಂಜರಿ ಕಾರ್ಯಕ್ರಮ ಎಲ್ಲರ ಮನಸೂರೆಗೊಂಡಿತು.

ಇದ್ದಕ್ಕೂ ಮುನ್ನ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬಿ.ಪಿ.ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಭದ್ರಾ ಕಾಡಾ ಸದಸ್ಯ ಗೋವಿನಹಾಳ್ ರಾಜಣ್ಣ, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಪತ್ರಕರ್ತ ಜಿಗಳಿ ಪ್ರಕಾಶ್, ಗ್ರಾ.ಪಂ ಸದಸ್ಯ ಎ.ಕೆ.ಹನುಮಂತಪ್ಪ, ಶಿಕ್ಷಕ ಜಿಗಳಿ ಕರಿಬಸಯ್ಯ ಮತ್ತಿತರರು ಭಾಗವಹಿಸಿದ್ದರು.

# ಪುಟ್ಟಮ್ಮಗೆ ಗೈಡ್ಸ್ ಸಂಸ್ಥೆ ಶ್ರದ್ಧಾಂಜಲಿ



ದಾವಣಗೆರೆ, ಮಾ.10- ಇತ್ತೀಚೆಗೆ ನಿಧನರಾದ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಪುಟ್ಟಮ್ಮ ಮಹಾರುದ್ರಯ್ಯ ಅವರಿಗೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ವತಿಯಿಂದ ಇಂದು ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡಿದ್ದ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತರೂ, ಮಾಜಿ ಸಚಿವರೂ ಆದ ಪಿ.ಜಿ.ಆರ್. ಸಿಂಧ್ಯಾ ಅವರು ಮಾತನಾಡಿ, ಪುಟ್ಟಮ್ಮ ನವರ ಸೇವೆ ಆದರ್ಶನಿಯವಾದದ್ದು ಎಂದು ನುಡಿದರು.

ಜಿಲ್ಲಾ ಮುಖ್ಯ ಆಯುಕ್ತ ಮುರುಘರಾಜೇಂದ್ರ ಜೆ. ಚಿಗಟೇರಿ,ಜಿಲ್ಲಾ ಸ್ಕೌಟ್ ಆಯುಕ್ತ ಎ.ಪಿ. ಷಡಾಕ್ಷರಪ್ಪ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಮಂಜುಳಾ, ಅಧ್ಯಕ್ಷರಾದ ಮಹಮದ್ ವಾಸಿಲ್ ಅವರುಗಳು ಪುಟ್ಟಮ್ಮನವರ ಸೇವೆಯನ್ನು ಸ್ಮರಿಸಿ, ಶಾಂತಿ ಕೋರಿದರು.

ನಂತರ ಪಿ.ಜಿ.ಆರ್. ಸಿಂಧ್ಯಾ ಅವರ ನೇತೃತ್ವದಲ್ಲಿ ಮೃತರ ನಿವಾಸಕ್ಕೆ ತೆರಳಿ ಪಾರ್ಥಿವ ಶರೀರದ ಮೇಲೆ ಸ್ಕೌಟ್ ಮತ್ತು ಗೈಡ್ಸ್ ಧ್ವಜವನ್ನು ಹೊದಿಸುವ ಮೂಲಕ ಗೌರವ ವಂದನೆ ಸಲ್ಲಿಸಲಾಯಿತು.

# ನಗರದಲ್ಲಿ ಇಂದು ಜಾಥಾ

ಜನಾಂದೋಲನ ಮಹಾಮೈತ್ರಿ ಜಾಥಾ ಇಂದು ಬೆಳಿಗ್ಗೆ 11 ಗಂಟೆಗೆ ಜಯದೇವ ಸರ್ಕಲ್‌ನಲ್ಲಿ ನಡೆಯಲಿದೆ. ಪ್ರಾಸ್ತಾವಿಕವಾಗಿ ಶಿವನಕೆರೆ ಬಸವಲಿಂಗಪ್ಪ ಮಾತನಾಡುವರು. ಮುಖ್ಯ ಅತಿಥಿಗಳಾಗಿ ಎಸ್.ಆರ್. ಹಿರೇಮಠ್, ಮಹಿಮಾ ಪಟೇಲ್, ಅನಿಶ್ ಪಾಷ ಆಗಮಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ. ಬಸವರಾಜ್ ವಹಿಸುವರು.


**ಸೈಟುಗಳು ಮಾರಾಟಕ್ಕಿದೆ**
ಹೈಟೆಕ್ ಹಾಸ್ಪಿಟೆಲ್ ರಸ್ತೆ, ಸಾಯಿ ಬಾಬಾ ದೇವಸ್ಥಾನ ಹಿಂಭಾಗ 30x50 ಪೂರ್ವ, ಹೈಟೆಕ್ ಲೇಔಟ್‌ನಲ್ಲಿ 30x50 ಪಶ್ಚಿಮ, ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**BK ಬಾರ್ ಅಂಡ್ ರೆಸ್ಟೋರೆಂಟ್**
ಬೀಡಾ, ಕಿರಾಣಿ ಅಂಗಡಿಗೆ ಮಳಿಗೆ ಬಾಡಿಗೆಗೆ ಇದೆ. ವಿಚಾರಿಸಿ : ಬೈಪಾಸ್ ಮೋತಿ ನಗರ, ಬಾಡಾ ಕ್ರಾಸ್, NH4, ದಾವಣಗೆರೆ.
ಫೋ : 98441 01178

**ನಿಮ್ಮ ಆಸ್ತಿ ಉಯಿಲು/ವಿಲ್**
ನೀವು ಸ್ವಯಾರ್ಜಿತವಾಗಿ ಗಳಿಸಿ ನಿಮ್ಮ ಹೆಸರಿಗೆ ಮಾತ್ರ ಇರತಕ್ಕ ಮನೆ, ಸೈಟು, ಜಮೀನುಗಳು ನಿಮ್ಮ ಕುಟುಂಬದ ಸದಸ್ಯರಿಗೆ ಸುರಕ್ಷಿತವಾಗಿರಲು ಉಯಿಲು, ವಿಲ್ ಮಾಡಲು ಸಂಪರ್ಕಿಸಿರಿ.
ಹೊನ್ನೂರಸ್ವಾಮಿ ವಾಂಜ್ರೆ
ಫೋ. : 87926 04196

**ಮನೆಗಳು ಲೀಸ್‌ಗಿವೆ**
ಶಿರಮಗೊಂಡನಹಳ್ಳಿಯಲ್ಲಿ ಸಿಂಗಲ್ ಬೆಡ್ ರೂಂ 2 ಮನೆಗಳು ಹಾಗೂ ಡಬಲ್ ಬೆಡ್ ರೂಂನ 1 ಮನೆ, ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಮನೆಗಳು ಲೀಸ್‌ಗಿದೆ.
ಡಾ.ಪಿ ಮಹಾರುದ್ರಾಚಾರ್
87223 63501, 76195 73401

**ನಿವೇಶನಗಳು ಮಾರಾಟಕ್ಕಿವೆ**
ಪೂರ್ವಮುಖ 30x35.5 ನಿವೇಶನಗಳು ಮಾರಾಟಕ್ಕಿವೆ.
ಸಂಪರ್ಕಿಸಿ. 94481 22133
ಮೇಘರಾಜ್ : 63612 52520
ಪ್ರಕಾಶ್‌ಕೋರಿ : 99453 21371

**ಶಿಕ್ಷಕಿಯರು ಬೇಕಾಗಿದ್ದಾರೆ**
PUC, NTC -4, D.Ed / T.CH -4 BA, B.Ed -4, ಆಯಾ / ಸಹಾಯಕಿ 2
ಜ್ಞಾನದೀಪ ಪಬ್ಲಿಕ್ ಸ್ಕೂಲ್, 60 ಅಡಿ, ರಿಂಗ್ ರಸ್ತೆ, ನಿಟುವಳ್ಳಿ. ದಾವಣಗೆರೆ.
94496 79346
89710 18943

**ಸೈಟುಗಳು ಮಾರಾಟಕ್ಕಿವೆ**
ಹರಿಹರದಲ್ಲಿ ವಿನಾಯಕ ನಗರ, ಮಹಜೇನಹಳ್ಳಿ ತಾಂಡಾದ ಹತ್ತಿರ ಕಡಿಮೆ ಬೆಲೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ.
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಫೋ. : 97424 34049

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ತಕ್ಷಣ ಬೇಕಾಗಿದ್ದಾರೆ**
ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
94821 09492
94807 77338

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ ಬಸವೇಶ್ವರ ಫಿಲ್ಲಿಂಗ್ ಸ್ಟೇಷನ್, ಭಾರತ್ ಪೆಟ್ರೋಲ್ ಲಿಮಿಟೆಡ್(BPCL), ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್, ದಾವಣಗೆರೆ.
94807 77338, 94821 09492

**ಆಸ್ತಿಗಳ ವಿಭಾಗಕ್ಕೆ**
ನಿಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲಿ ನಿಮಗೆ ಬರಬೇಕಾದ ಭಾಗದ ಆಸ್ತಿಗೆ ನ್ಯಾಯಾಲಯದಿಂದ ಪ್ರತ್ಯೇಕ ಡಿಕ್ರಿ ಮತ್ತು ಸ್ವಾಧೀನ ಆದೇಶ ಪಡೆಯಲು ಸಂಪರ್ಕಿಸಿ.
ಹೊನ್ನೂರಸ್ವಾಮಿ ವಾಂಜ್ರೆ
ಫೋ. : 87926 04196

**ಬಾಡಿಗೆಗೆ / ಲೀಸ್‌ಗೆ ಇದೆ**
ಚಾಲ್ತಿಯಲ್ಲಿರುವ ಸಿಮೆಂಟ್ ಮೋಲ್ಡ್ ಫ್ಯಾಕ್ಟರಿ ಬಾಡಿಗೆಗೆ / ಲೀಸ್‌ಗೆ ಇದೆ ಜರೀಕಟ್ಟೆ, ಮಲೇಬೆನ್ನೂರು ಮುಖ್ಯ ರಸ್ತೆ.
99017 74089
93802 99918

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ.)
ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, 4 ನೇ ಮೇನ್, ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ಸರ್ಕಲ್ ಹತ್ತಿರ ದಾವಣಗೆರೆ.
81972 20933

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Delivery Boy ಆಗಿ ಕೆಲಸ ಮಾಡಲು ಬೈಕ್ ಇರುವಂತಹ ಹುಡುಗರು ಬೇಕಾಗಿದ್ದಾರೆ.
Age: 18 ರಿಂದ 28 ವರ್ಷ
9738523711

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಭಟ್ಟರು ಬೇಕಾಗಿದ್ದಾರೆ**
ಮಶಿನ್‌ನಿಂದ ಕಾರ ಮತ್ತು ಸ್ವಿಟ್ಸ್ ತಯಾರಿಸಲು ಭಟ್ಟರ ಅವಶ್ಯವಿದ್ದು, ಆಸಕ್ತಿವುಳ್ಳವರು ಸಂಪರ್ಕಿಸಿ. ಶ್ರೀ ಬನಶಂಕರಿ ತಿಂಡಿ ಅಂಗಡಿ ಅಶೋಕ ರಸ್ತೆ, (ಗಾಂಧಿ ಸರ್ಕಲ್ ಬಳಿ) ಅಲೋಕ ಲಾಡ್ಜ್ ಎದುರು, ದಾವಣಗೆರೆ.
ವಿರೇಶ್ : 90085 69535
ವಿನಾಯಕ : 99005 19327

**CAD WORK**
ನಮ್ಮಲ್ಲಿ ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ) ಕೇವಲ 999 ರೂಪಾಯಿಗಳು ಮಾತ್ರ, ಮತ್ತು 3D ಫ್ಲೋರ್ ಪ್ಲಾನ್, ಇಂಟೀರಿಯರ್ ಡಿಸೈನ್ and 3D Elevation ಮಾಡಿಕೊಡುತ್ತೇವೆ. ಸಂಪರ್ಕಿಸಿ.
99644 22460

**ಮನೆ ಬಾಡಿಗೆಗೆ ಇದೆ**
ಸಿದ್ಧವೀರಪ್ಪ ಬಡಾವಣೆ 12 'A' ಕ್ರಾಸ್ #1680/10 P ನಲ್ಲಿ 2 ಬೆಡ್ ರೂಂವುಳ್ಳ ಪಶ್ಚಿಮ ಬಾಗಿಲಿನ RCC ಮನೆ ಬೋರ್‌ವೆಲ್, ಮುನ್ಸಿಪಲ್ ನೀರು, AEH ಸೌಕರ್ಯವುಳ್ಳ 15x50 ಕಾರ್ನರ್, ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇದೆ.
94806 67365, 94489 30345

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ ಬೇಕಾಗಿದ್ದಾರೆ. ಸಂಬಳ 9000 ರೂ. ಊಟ, ರೂಂ ಉಚಿತ.
97400 98064
97400 98047

**ಕೆಲಸಕ್ಕೆ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಫೋ. : 77602 68105

**ಮಳಿಗೆ ಬಾಡಿಗೆಗೆ ಇದೆ**
12x60, 12x30 ಡೀಪ್ ಫ್ರಿಜರ್ ಹಾಗೂ ಹೋಟೆಲ್ ಸಾಮಗ್ರಿಗಳು ಮಾರಾಟಕ್ಕಿವೆ KTJ ನಗರ, 12th ಕ್ರಾಸ್, ಹದಡಿ ರೋಡ್, ದಾವಣಗೆರೆ.
94480 28276
70198 33126

**ಬೇಕಾಗಿದ್ದಾರೆ**
ರಾಜಲಕ್ಷ್ಮಿ ಫಾರ್ಮದಲ್ಲಿ ಕೆಲಸ ಮಾಡಲು, Stack ತೆಗೆಯುವುದಕ್ಕೆ ಮಹಳೆಯರು, ಡೆಲಿವೆರಿ ಕೊಡಲು Boy's ಬೇಕಾಗಿದ್ದಾರೆ.
Addrress : P.J. Extn 7th Main, 7th Cross, Davanagere
73534 37555

**ಮನೆ ಬಾಡಿಗೆಗೆ ಇದೆ**
2ನೇ ಮಹಡಿಯಲ್ಲಿ ವಾಸ್ತು ಹಾಗೂ ಸಕಲ ಸೌಕರ್ಯ ಇರುವ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. #1859/34, "ಭಾವ ಸಂಗಮ" ನೂತನ ಕಾಲೇಜು ಹಿಂಭಾಗ, 4ನೇ ಮುಖ್ಯ ರಸ್ತೆ LIC ಕಾಲೋನಿ ದಾವಣಗೆರೆ.
73385 58138, 80503 57533

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**GPSTR, KPTCL COACHING**
ಹೊಸ ಬ್ಯಾಚ್‌ಗಳು ಪ್ರಾರಂಭ ಸಮೃದ್ಧಿ ಕೋಚಿಂಗ್ ಅಕಾಡೆಮಿ, ಸೆಂಟ್‌ಪಾಲ್ ಕಾನ್ವೆಂಟ್ ರೋಡ್, ದಾವಣಗೆರೆ
63646 40296

**ಸೈಟು ಮಾರಾಟಕ್ಕಿದೆ**
ಚೌಕಿಪೇಟೆ ಮಹಾರಾಜಪೇಟೆ ವಿಠ್ಠಲ ಮಂದಿರದ ಪಕ್ಕದ ರಸ್ತೆಯಲ್ಲಿ 15x42 ಅಳತೆಯ ಸೈಟು ಮಾರಾಟಕ್ಕಿದೆ.
94838 62779

**GST Registration**
INCOME TAX cases, Audit and for Account Maintenances
MEGHANA ASSOCIATES (R)
99809 16126

**WANTED**
Lady Candidate with basic computer Knowledge, Required for office work
99006 66122
99862 30333

**ಸಂಘ-ಸಂಸ್ಥೆಗಳ**
ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.
MEGHANA ASSOCIATES. (R)
99809 16126

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ SSLC, PUC ಆದ ಮಹಿಳೆ ಬೇಕಾಗಿದ್ದಾರೆ
84949 49909

**ತಕ್ಷಣವೇ ಬೇಕಾಗಿದ್ದಾರೆ**
ಅಕೌಂಟೆಂಟ್ಸ್ ಕೆಲಸಕ್ಕೆ ಬೇಕಾಗಿದ್ದಾರೆ
B.Com Graduate with tally knowledge 2-3 year experiance appreciable
99459 88776
96060 96697, 96060 96695

**ಓಂ ಶ್ರೀ ತುಳಜಾಭವಾನಿ ಜ್ಯೋತಿಷ್ಯಾಲಯ**
ಪಂಡಿತ್: ಯಲ್ಲಪ್ಪರಾವ್ ಜೋಷಿ
ಕೊಳ್ಳೆಗಾಲದ ನಂ. 1 ಜ್ಯೋತಿಷ್ಯರು ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿದ್ದರೂ ಕೇವಲ 3 ದಿನಗಳಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಇಂದೇ ಭೇಟಿ ಕೊಡಿ. ದಾವಣಗೆರೆ.
99456 66887

**House For Lease or Rent**
2 BHK, 1st Floor with lift Facility Doggalli Compound, Near LIC Office, K.R. Road Cross, Davangere.
Ph. : 94483 76399

**ಬೇಕಾಗಿದ್ದಾರೆ**
ಗೋಬಿ ಮಾಡುವವರು ಟೀ ಮಾಡುವವರು, ಕಲಿಯಲು ಆಸಕ್ತಿ ಇರುವವರು ಬೇಕಾಗಿದ್ದಾರೆ.
ಸಂಪರ್ಕಿಸಿ :
98864 39097

**ಬೇಕಾಗಿದ್ದಾರೆ**
Call Center-Girls
Accountant - Girls
Field Executive - Boys
Sri Kuruvatti Basaveshwara Pharma
College Road, P.J. Extn., Davangere.
Ph. : 95139 15520

**ಬೇಕಾಗಿದೆ**
ರಾಗಿ ಕ್ಲೀನಿಂಗ್ ಮಿಷಿನ್ ಮತ್ತು ಹಿಟ್ಟಿನ ಗಿರಣಿಗಳು ಮೋಟಾರ್ ಬೋರ್ಡ್ ಸೆಕೆಂಡ್ ಹ್ಯಾಂಡಲ್ ಬೇಕಾಗಿದೆ.
88611 62024

**ಅಪಾರ್ಟ್‌ಮೆಂಟ್ ಮಾರಾಟಕ್ಕಿದೆ**
ಬೆಂಗಳೂರು 8 ನೇ ಮೈಲಿ (ತುಮಕೂರು ರಸ್ತೆ) ಹತ್ತಿರ ಬರುವ Prestige Jindal City ನಲ್ಲಿ 4BHK Apartment ಮಾರಾಟಕ್ಕಿದೆ.
98453 82270

**ಮನೆ ಬಾಡಿಗೆಗೆ ಇದೆ**
ಒಂದನೇ ಮಹಡಿಯಲ್ಲಿ 2BHK ಯ ಉತ್ತಮ ನೀರು, ಗ್ಯಾಸ್, ಗೀಸರ್ ಕನೆಕ್ಷನ್, ಇಟಾಲಿಯನ್ ಕಿಚನ್‌ವುಳ್ಳ ಮನೆ #118/1ಸಿ, 34 & 39, ಎಂ.ಸಿ. ಕಾಂಪ್ಲೆಕ್ಸ್, ಬಿ.ಟಿ. ಲೇಔಟ್‌ನಲ್ಲಿ ವಾಸದ ಮನೆ ಉಪಯೋಗಕ್ಕೆ ಬಾಡಿಗೆಗೆ ದೊರೆಯುತ್ತದೆ.
ನಾಗರಾಜ್ :98454 72073
ಮಲ್ಲೇಶ್ : 78927 89804

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
6ನೇ ಲಕ್ಕಿ ಡ್ರಾ ನಂಬರ್
980
ರಕ್ಷತ್ ಡಿ.ಆರ್.
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
**ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್**
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ 8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**WANTED**
Sulthan Diamonds and Gold is hiring Sales Executives with min 1yr experience in Jewellery for its Davanagere & Shivamogga Locations.
Walk-in-interview : Davanagere - 11th March 2022 & Shivamogga - 12th March 2022. (timing 10.00 AM - 3.00 PM) Other vacancies: Watch Sales Executives for Davanagere and Customer Relations Executive for Shivamogga. Freshers may also apply. For more information
call 80500 62916 or write to hr@sulthangold.com

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581

**House For Rent**
15x50 Single Bed Room House at 5th Cross, K.B. Extn., Near Shivappa Circle,
Mohammed Zubair
90355 01898


**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ**
GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ಅನುಭವವುಳ್ಳ ನುರಿತ A.N.M ಮತ್ತು G.N.M. ಆದವರು ಮತ್ತು ಆಯಾಗಳು ಬೇಕಾಗಿದ್ದಾರೆ. ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡಾಟಾದೊಂದಿಗೆ ಸಂಪರ್ಕಿಸಿ.
M: 98450 35710

**PRINCE COLLEGE**
DAVANGERE
SSLC, PUC, BA, B.Com, B.Sc, M.A, M.Com, M.Sc, B.Lib, B.Lisc, M.B.A, M.C.A, LL.B, Diploma, B.Tech., D. Farm & All Courses
77609 55550, 96200 28627

## ಬಿಐಹೆಚ್‌ಇ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ಕಾಲೇಜಿಗೆ ಸಿಎ ಫಲಿತಾಂಶ



ದಾವಣಗೆರೆ, ಮಾ. 10- ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ನಡೆಸಿದ ಸಿಎ ಫೌಂಡೇಷನ್ ಪರೀಕ್ಷೆಯಲ್ಲಿ ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿ ಅಭಿಷೇಕ್ ಎ. ಜಾಧವ್ ಅವರು ತೇರ್ಗಡೆ ಹೊಂದಿದ್ದಾರೆ ಎಂದು ಕಾಲೇಜಿನ ನಿರ್ದೇಶಕ ಡಾ. ಹೆಚ್.ವಿ. ಸ್ವಾಮಿ ತ್ರಿಭುವಾನಂದ ತಿಳಿಸಿದ್ದಾರೆ. ಅಭಿಷೇಕ್ ಸಾಧನೆಗೆ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ್, ಕಾಲೇಜಿನ ಅಧ್ಯಕ್ಷ ಅಥಣಿ ಎಸ್. ವೀರಣ್ಣ, ಪ್ರಾಂಶುಪಾಲ ಡಾ. ಬಿ. ವೀರಪ್ಪ ಅಭಿನಂದಿಸಿದ್ದಾರೆ.

## ಶ್ಯಾಬನೂರಿನಲ್ಲಿ ನಾಳೆ ಆಂಜನೇಯ ಸ್ವಾಮಿ ತೇರು



ದಾವಣಗೆರೆ, ಮಾ.10- ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ನಾಡಿದ್ದು ದಿನಾಂಕ 12ರ ಶನಿವಾರ ರಾತ್ರಿ 12 ಗಂಟೆಗೆ ಜರುಗಲಿದೆ.

ದಿನಾಂಕ 13ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಬೆಲ್ಲದ ಬಂಡಿ ಉತ್ಸವ ಮತ್ತು ಶ್ಯಾಬನೂರು ಸ್ವಾಮಿ, ನಾಗನೂರು ಸ್ವಾಮಿ ಶಿರಮಗೊಂಡನಹಳ್ಳಿ ಮತ್ತು ನಿಟುವಳ್ಳಿ ಗ್ರಾಮಗಳಿಗೆ ಸಂಚಾರ ಏರ್ಪಾಡಾಗಿದೆ. ದಿನಾಂಕ 14ರ ಸೋಮವಾರ ಓಕುಳಿ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ. ರಾತ್ರಿ 9.30ಕ್ಕೆ ಶ್ರೀ ಮಾರುತಿ ನಾಟ್ಯ ಕಲಾ ಸಂಘದಿಂದ ಬಸವೇಶ್ವರ ರಂಗ ಮಂದಿರದಲ್ಲಿ 'ಕಲಿಯುಗದಲ್ಲಿ ಘರ್ಜಿಸಿದ ಕರ್ಣಾರ್ಜುನ' ನಾಟಕ ಪ್ರದರ್ಶನಗೊಳ್ಳಲಿದೆ.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆವರಗೆರೆ, ಬಾಡ ಕ್ರಾಸ್, ಬಸಾಪುರ, ಹಳೇಚಿಕ್ಕನಹಳ್ಳಿ, ಹೊಸಚಿಕ್ಕನಹಳ್ಳಿ, ಐಗೂರು, ಐಗೂರು ಗೊಲ್ಲರಹಟ್ಟಿ, ವಡ್ಡಿನಹಳ್ಳಿ, ಹೊನ್ನೂರು, ಎಚ್.ಕಲ್ಪನಹಳ್ಳಿ, ಮಲ್ಲಶೆಟ್ಟಿಹಳ್ಳಿ, ಕರೀಲಕ್ಕೇನಹಳ್ಳಿ ಮತ್ತು ಚಟ್ಟೋಬನಹಳ್ಳಿ ಗ್ರಾಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಗ್ಗೆ 10.30 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.





**ಡಾ. ಯದು ಕೆ. ಎಲ್.**
ಸಲಹೆಗಾರರು ನರಶಸ್ತ್ರ ಚಿಕಿತ್ಸಕರು ಮತ್ತು ಬೆನ್ನುಮೂಳೆಯ ಶಸ್ತ್ರಚಿಕಿತ್ಸಕರು
ಆಸ್ಟರ್ ಆಸ್ಪತ್ರೆ, ಬೆಂಗಳೂರು

**ಯದು ಕಿವಿ-ಮೂಗು-ಗಂಟಲು / ಮೆದುಳು ಮತ್ತು ಬೆನ್ನುಮೂಳೆಯ ಸೆಂಟರ್**
# 462, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.
12th ಶನಿವಾರ 2022 , (ಪ್ರತಿ ತಿಂಗಳ 2ನೇ ಶನಿವಾರ)
ಬೆಳಿಗ್ಗೆ 10:00 ರಿಂದ ಸಂಜೆ 3:00ರ ವರೆಗೆ

ಈ ಕೆಳಗಿನ ವೈದ್ಯಕೀಯ ಸ್ಥಿತಿಯಲ್ಲಿರುವವರು ಭೇಟಿ ನೀಡಬಹುದು:
- ಮೆದುಳಿನ ಅಸ್ವಸ್ಥತೆಗಳು ▪ ತಲೆ ನೋವು ▪ ಆಘಾತಕಾರಿ ಮೆದುಳು ಗಾಯಗಳು ▪ ಮೆದುಳಿನ ಗಡ್ಡೆ
- ಪಾರ್ಶ್ವವಾಯು ▪ ಅಪಸ್ಮಾರ ▪ ಬೆನ್ನುಮೂಳೆಯ ತೊಂದರೆಗಳು ▪ ಬೆನ್ನು ನೋವು ▪ ಕುತ್ತಿಗೆ ನೋವು
- ಕಾಲು ನೋವು ▪ ಆಘಾತಕಾರಿ ಬೆನ್ನುಮೂಳೆ ಗಾಯಗಳು ▪ ಬೆನ್ನುಮೂಳೆಯ ವಿರೂಪ

ಕರೆಮಾಡಿ: 08192231033 / 9483964373 / 8296099030

CA-37, 24th Main, 1st Phase,
J.P. Nagar, Bangalore 560078.

Aster RV HOSPITAL
We'll Treat You Well


## ಕಲ್ಪನಹಳ್ಳಿ ನಾಡಿಗೇರ ಶ್ರೀಮತಿ ಹಾಲಮ್ಮ ಲಿಂಗೈಕ್ಯ



ದಾವಣಗೆರೆ ತಾಲ್ಲೂಕು ಕಡ್ಲೇಬಾಳ್ ಗ್ರಾಮದ ವಾಸಿ ಕಲ್ಪನಹಳ್ಳಿ ನಾಡಿಗೇರ ಹಾಲೇಶಪ್ಪನವರ ಧರ್ಮಪತ್ನಿ

**ಶ್ರೀಮತಿ ಹಾಲಮ್ಮ**

ಇವರು ದಿನಾಂಕ 10.03.2022ರ ಗುರುವಾರ ಸಂಜೆ 6.30ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಲಿಂಗೈಕ್ಯರಿಗೆ ಸುಮಾರು 62 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 11.03.2022 ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಕಡ್ಲೇಬಾಳಿನಲ್ಲಿ ನೆರವೇರಿಸಲಾಗವುದು.

ದುಃಖತಪ್ತ ಕುಟುಂಬ ವರ್ಗ: **ಕಲ್ಪನಹಳ್ಳಿ ವಂಶಸ್ಥರು**

## ಪ್ರಧಾನಿ ಮೋದಿ ಸರ್ಕಾರದ ಜನಪರ ಕೆಲಸಕ್ಕೆ ಜನಮನ್ನಣೆ



ದಾವಣಗೆರೆ, ಮಾ.10- ಪಂಚರಾಜ್ಯ ಚುನಾವಣೆಯಲ್ಲಿ 4 ರಾಜ್ಯಗಳಲ್ಲಿ ಮತ ದಾರರು ಜನಪರ ಕೆಲಸಕ್ಕೆ ಆಶೀರ್ವದಿಸಿದ್ದಾರೆ ಎಂದು ನಗರ ಪಾಲಿಕೆಯ ಮಾಜಿ ಮಹಾ ಪೌರರೂ ಆದ ಹಾಲಿ ಸದಸ್ಯ ಬಿ.ಜಿ. ಅಜಯ್ ಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ. 2014 ರಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸರ್ಕಾರ ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುತ್ತಿದ್ದು, ವಿವಿಧ ಯೋಜನೆಗಳನ್ನು ನೇರವಾಗಿ ಪ್ರಜೆಗಳಿಗೆ ಮುಟ್ಟಿಸು ತ್ತಿದೆ. ಕೊರೊನಾ ಸಂಕಷ್ಟದ ಕಾಲದಲ್ಲಿ ನಿರ್ವಹಣೆ, ಪ್ರತಿಯೊಬ್ಬ ಪ್ರಜೆಗೆ ಲಸಿಕೆ ಹಾಗೂ ಹಲವಾರು ಅಭಿವೃದ್ಧಿ ಕೆಲಸಗಳಿಗೆ ಈ ಫಲಿತಾಂಶ ಕೈಗನ್ನಡಿಯಾಗಿದೆ. ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.



## ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ-ಆಪರೇಟಿವ್ ಲಿ.,

# ಎನ್.ಎಫ್.-01, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, 1ನೇ ಮಹಡಿ, ನಿಟುವಳ್ಳಿ ರಸ್ತೆ, ದಾವಣಗೆರೆ - 577002. ಫೋ : 08192-232377

### ಆಡಳಿತ ಮಂಡಳಿ ಅವಿರೋಧ ಆಯ್ಕೆ


ದಿ ವೆಜಿಟೆಬಲ್ ಪ್ಲಾಂಟ್ ಸೌಹಾರ್ದ ಕೋ- ಆಪರೇಟಿವ್ ಲಿ., ದಾವಣಗೆರೆ ಇದರ 2021-22ನೇ ಸಾಲಿನಿಂದ ಮುಂದಿನ ಅವಧಿಯವರೆಗೆ ದಿನಾಂಕ: 10-03-2022ರಂದು ನಡೆದ ಸಭೆಯಲ್ಲಿ ಕೆಳಕಂಡವರನ್ನು ಆಡಳಿತ ಮಂಡಳಿಗೆ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಸಹಾಯಕ ಲೆಕ್ಕಪರಿಶೋಧಕರಾದ ಶ್ರೀ ಎನ್.ಡಿ. ಮಂಜು ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.



ಶ್ರೀ ಬಿ. ಸುರೇಶ್ ಹಾಲೇಕಲ್ – ಅಧ್ಯಕ್ಷರು
ಶ್ರೀ ಜೆ.ಕೆ. ಶಿವಕುಮಾರ್ – ಉಪಾಧ್ಯಕ್ಷರು
ಶ್ರೀ ಕೆ.ಹೆಚ್. ಶಿವಯೋಗಪ್ಪ – ನಿರ್ದೇಶಕರು
ಶ್ರೀ ಆರ್.ಎನ್. ಮಾರುತಿ – ನಿರ್ದೇಶಕರು



ಶ್ರೀ ಎನ್. ರಾಜಣ್ಣ – ನಿರ್ದೇಶಕರು
ಶ್ರೀ ಹೆಚ್.ಬಿ. ಮಂಜುನಾಥ – ನಿರ್ದೇಶಕರು
ಶ್ರೀ ಎಸ್.ವಿ. ರುದ್ರಮುನಿ – ನಿರ್ದೇಶಕರು
ಶ್ರೀ ಸಿ. ಹನುಮಂತಪ್ಪ – ನಿರ್ದೇಶಕರು



ಶ್ರೀ ಟಿ. ಮಹಾಂತೇಶ್ – ನಿರ್ದೇಶಕರು
ಶ್ರೀ ಎಂ.ಹೆಚ್. ರಾಜಪ್ಪ – ನಿರ್ದೇಶಕರು
ಶ್ರೀ ಮಲ್ಲಿಕಾರ್ಜುನ್ ಪಿ. ವಾಲಿ – ನಿರ್ದೇಶಕರು
ಶ್ರೀಮತಿ ಆಶಾ ಕೃಷ್ಣಮೂರ್ತಿ – ನಿರ್ದೇಶಕರು
ಶ್ರೀಮತಿ ಶ್ವೇತಾ ಹೆಚ್.ಟಿ. – ನಿರ್ದೇಶಕರು

|| ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 5ನೇ ಕ್ರಾಸ್ ವಾಸಿ **ಶ್ರೀ ಕೃಷ್ಣಪ್ಪ ಸಾರಥಿ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 3.3.2022ರ ಗುರುವಾರ ಬೆಳಗಿನಜಾವ 1.30ಕ್ಕೆ ನನ್ನ ಧರ್ಮಪತ್ನಿ **ಶ್ರೀಮತಿ ಎಸ್.ಕೆ. ಶಾಂತಮ್ಮ** ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಜನನ : 24.2.1951, ಮರಣ : 3.3.2022

**ಕೈಲಾಸ ಸಮಾರಾಧನೆಯನ್ನು** ದಿನಾಂಕ 11.3.2022ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗೃಹ # 4125/40, ಸಿದ್ದವೀರಪ್ಪ ಬಡಾವಣೆ, 5ನೇ ಕ್ರಾಸ್, ದಾವಣಗೆರೆ ಇಲ್ಲಿ ನೆರವೇರಿಸಲಾಗುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಶ್ರೀ ಕೃಷ್ಣಪ್ಪ, ಸಾರಥಿ,** ನಿವೃತ್ತ ಸೀನಿಯರ್ ಹೆಲ್ತ್ ಇನ್‌ಸ್ಪೆಕ್ಟರ್
**ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು.**
ಮೊ. 97423-15934, 97423-15512

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಚಿರಸ್ಮರಣೆ



**ಲಿಂ. ಶ್ರೀ ಕೆ.ಜಿ. ಸುರೇಶ್ (ಬಾಬಣ್ಣ)**
**ಶಿರಮಗೊಂಡನಹಳ್ಳಿ**
ನಿಧನ : 11-03-2019

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : **ಶ್ರೀಮತಿ ಪುಷ್ಪಾ ಸುರೇಶ್**
ಮಾಜಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯ್ತಿ, ದಾವಣಗೆರೆ.
ಪುತ್ರ : **ಚಿ. ಸನತ್ ಸೂರ್ಯ**
ಪುತ್ರಿ : **ಶ್ರೀಮತಿ ಸಂಜನಾ,** ಅಳಿಯ : **ಸಚಿನ್ ಗೌಡ**
ಸಹೋದರರು, ಸಹೋದರಿಯರು ಮತ್ತು ಬಂಧು-ಮಿತ್ರರು.

## ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ವತಿಯಿಂದ ದಾವಣಗೆರೆ ಜಿಲ್ಲೆ ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಳಕಂಡ ಗ್ರಾಮಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮ

**ದಿನಾಂಕ : 11.03.2022, ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ**



**ಕಾಮಗಾರಿಗಳ ವಿವರ :**

I. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾಮಗಾರಿಗಳು

1) ಜಗಳೂರು ತಾಲ್ಲೂಕಿನ ಅಸಗೋಡು ಗ್ರಾಮದಿಂದ ತುಪ್ಪದಹಳ್ಳಿ ಗ್ರಾಮದವರೆಗೆ (ಎರೆಮಣ್ಣು ಇರುವಲ್ಲಿ ಸಿ.ಸಿ. ರಸ್ತೆ ಮತ್ತು ಡಾಂಬರ್ ರಸ್ತೆ)
ಅಂದಾಜು ಮೊತ್ತ: ರೂ.240.00 ಲಕ್ಷಗಳು

2) ಜಗಳೂರು ತಾಲ್ಲೂಕಿನ ಪಲ್ಲಾಗಟ್ಟೆ ಗ್ರಾಮದ ಒಣಗಟ್ಟೆಯವರೆಗೆ ಸರ್ಕಲ್ ಮುಖಾಂತರ 7ಮೀ ಅಗಲದ ಸಿ.ಸಿ.ರಸ್ತೆ ನಿರ್ಮಾಣ ಮತ್ತು ವಿದ್ಯುತ್ ದೀಪ ಅಳವಡಿಸುವುದು
ಅಂದಾಜು ಮೊತ್ತ: ರೂ.200.00 ಲಕ್ಷಗಳು

3) ಜಗಳೂರು ತಾಲ್ಲೂಕಿನ ಯರಲಕಟ್ಟೆ ಗ್ರಾಮದಲ್ಲಿ ಸರ್ಕಲ್ ಮುಖಾಂತರ ಗುರುಸಿದ್ದಾಪುರ ಗ್ರಾಮಕ್ಕೆ ಕೂಡುವ ರಸ್ತೆಗೆ ಡಾಂಬರ್ ರಸ್ತೆ ನಿರ್ಮಾಣ
ಅಂದಾಜು ಮೊತ್ತ: ರೂ.180.00 ಲಕ್ಷಗಳು

4) ಜಗಳೂರು ತಾಲ್ಲೂಕಿನ ಅಗಸನಹಳ್ಳಿ ಗ್ರಾಮದಿಂದ ಮುಖ್ಯ ರಸ್ತೆಗೆ ಹೋಗುವ ರಸ್ತೆ ಅಭಿವೃದ್ಧಿ
ಅಂದಾಜು ಮೊತ್ತ: ರೂ.100.00 ಲಕ್ಷಗಳು

5) ಜಗಳೂರು ತಾಲ್ಲೂಕಿನ ಬಸವನಕೋಟೆ ಗ್ರಾಮದಿಂದ ಉದ್ದಬೋರನಹಳ್ಳಿ ಗ್ರಾಮದವರೆಗೆ ಡಾಂಬರ್ ರಸ್ತೆ ನಿರ್ಮಾಣ
ಅಂದಾಜು ಮೊತ್ತ: ರೂ.150.00 ಲಕ್ಷಗಳು

II ಜಗಳೂರು ತಾಲ್ಲೂಕಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಮೇಲಿನ ಗ್ರಾಮಗಳಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳು
ಅಂದಾಜು ಮೊತ್ತ: ರೂ.780.00 ಲಕ್ಷಗಳು

III ಜಗಳೂರು ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಂದ ಅನುಷ್ಠಾನಗೊಳಿಸುವ ಕಾಮಗಾರಿಗಳು
ಅಂದಾಜು ಮೊತ್ತ: ರೂ.140.00 ಲಕ್ಷಗಳು



ಮೇಲಿನ ಎಲ್ಲಾ ಕಾಮಗಾರಿಗಳ ಭೂಮಿ ಪೂಜೆಗೆ ಆಗಮಿಸುತ್ತಿರುವ

**ಸನ್ಮಾನ್ಯ ಶ್ರೀ ಡಾ. ಜಿ.ಎಂ. ಸಿದ್ದೇಶ್ವರ,**
ಮಾನ್ಯ ಸಂಸದರು, ದಾವಣಗೆರೆ

**ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ,**
ಶಾಸಕರು ಹಾಗು ಅಧ್ಯಕ್ಷರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

ಮತ್ತು ಬಿ.ಜೆ.ಪಿ.ಯ ಎಲ್ಲಾ ಕಾರ್ಯಕರ್ತರುಗಳಿಗೂ ಹಾಗೂ ಮುಖಂಡರುಗಳಿಗೂ, ಅಭಿಮಾನಿಗಳಿಗೂ ಹಾಗೂ ಸಂಬಂಧ ಪಟ್ಟ ಎಲ್ಲಾ ಗ್ರಾಮದ ಗ್ರಾಮಸ್ಥರುಗಳಿಗೂ

**ಹೃದಯ ಪೂರ್ವಕ ಸುಸ್ವಾಗತ**

**ಶ್ರೀ ಎ.ಎಂ. ಚಂದ್ರಪ್ಪ,** ಗುತ್ತಿಗೆದಾರರು ಮರಿಕುಂಟೆ, ಜಗಳೂರು ತಾಲ್ಲೂಕು


SUNSHINE PURANTAR HOSPITAL
Rainbow Children's Hospital | BirthRight BY RAINBOW HOSPITALS Your Right to a Safe Delivery

**ಮಕ್ಕಳಿಗಾಗಿ ವಿಶೇಷ ಆರೈಕೆ ಏಕೆಂದರೆ ಪ್ರತಿ ಮಗುವೂ ವಿಶೇಷವಾಗಿದೆ.**

**ಭಾರತದ ನಂಬರ್1 ಮಕ್ಕಳ ಆಸ್ಪತ್ರೆಯ ನೆಟ್ವರ್ಕ್**

ರೈನ್ಬೋ ಚಿಲ್ಡ್ರನ್ಸ್ ಆಸ್ಪತ್ರೆ, ಬೆಂಗಳೂರು
ಸಹಯೋಗದೊಂದಿಗೆ
ಸನ್ಶೈನ್ ಪುರಂತರ ಆಸ್ಪತ್ರೆ
ದಾವಣಗೆರೆಯಲ್ಲಿ ಮಕ್ಕಳಿಗಾಗಿ ಪರಿಣಿತ ಆರೈಕೆಯ ಸೇವೆಯನ್ನು ತರುತ್ತದೆ, ಆದ್ದರಿಂದ ನಿಮ್ಮ ಮಗುವಿಗೆ ಮನೆಯ ಸಮೀಪದಲ್ಲಿ ಗುಣಮಟ್ಟದ ಆರೈಕೆಯ ಸೇವೆಯನ್ನು ಪಡೆಯಬಹುದು.



- ಮಕ್ಕಳ ನರವಿಜ್ಞಾನ
- ಮಕ್ಕಳ ಸಂಧಿವಾತಶಾಸ್ತ್ರ
- ಮಕ್ಕಳ ರಕ್ತವಿಜ್ಞಾನ
- ಮಕ್ಕಳ ಮೂಳೆಶಾಸ್ತ್ರ

ತಿಂಗಳ ಪ್ರತಿ 2 ನೇ ಶುಕ್ರವಾರದಂದು ಸಮಾಲೋಚನೆ ಲಭ್ಯವಿದೆ

ಅಪಾಯಿಂಟ್ಮೆಂಟ್ ನ್ನು ಬುಕ್ ಮಾಡಲು ಇದಕ್ಕೆ ಕರೆ ಮಾಡಿರಿ
94489 55667 | 88846 34545
88844 36021

T&C apply

Rainbow Children's Hospital - Marathahalli
Marathahalli-KR Puram Outer Ring Rd, Doddanekundi, Marathahalli, Bengaluru - 560037.
www.rainbowhospitals.in


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte